# ನೇಸರು
## ತಿಂಗಳೋಲೆ
## ಮೈಸೂರು ಅಸೋಸಿಯೇಷನ್ ಮುಂಬೈ

Nesaru **Tingalole** Vol XXIII - 9 ಸೆಪ್ಟೆಂಬರ್ 2005

ಈ ಸಂಚಿಕೆಯಲ್ಲಿ

ಅಸೋಸಿಯೇಶನ್‌ನಲ್ಲಿ

ನಗೆ ಮಲ್ಲಿಗೆ • ರಮಾ ವಸಂತ್ 2

An Ode to the spirit of Mumbaiites 3

ರಾಮ ಧಾನ್ಯ ಚರಿತ್ರೆ • ಶ್ರೀಮತಿ ಸುಮನ್ ಕೆ. ಚಿಪ್ಳೂಣ್‌ಕರ್ 4

ವಿಮರ್ಶೆ :

ಶತಮಾನದ ಮಹಾಮಾನವ - ಕಾರಂತ • ಡಾ. ಜಿ.ಎನ್. ಉಪಾಧ್ಯ 6

SUBHAASHITAANI • Mrs. Janaki S. Mani 8

ಸುತ್ತಮುತ್ತ 9

Rs. 5/-

**The Mysore Association, Bombay**

393, Bhaudaji Road, Matunga, Mumbai - 400 019.

Phone : 2402 4647, 2403 7065 • Fax : 2401 0574

E-mail : karunadu@bom5.vsnl.net.in

# ನಗೆ ಮಲ್ಲಿಗೆ

- ರಮಾ ವಸಂತ್

ಮುಂಬೈನ ವೇಗದ ಹಾಗೂ ಯಾಂತ್ರಿಕ ಬದುಕಿನಲ್ಲಿ ನಗು ಎಂಬುದಕ್ಕೆ ವೇಳೆಯೂ ಇಲ್ಲ ಅಪರೂಪವು ಹೌದು, ಹೀಗಾಗಿ ಒಂದು ನಗುವಿನ ಹಬ್ಬವನ್ನು ಆಚರಿಸಬೇಕೆಂದು ಮೈಸೂರು ಅಸೋಸಿಯೇಷನ್ನಿನವರು ನಗೆ ಮಲ್ಲಿಗೆ ಎಂಬ ಹಾಸ್ಯ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ನಡೆಸಿಕೊಟ್ಟವರು ಬೆಂಗಳೂರಿನ



ಮಾತಿನಲ್ಲಿ ಹಾಸ್ಯ

ಗಾನ ವಿನೋದಿನಿ ಎಂಬ ತಂಡದವರು. ಸಂಜೆ ೬.೧೫ ಘಂಟೆಗೆ ಕಾರ್ಯಕ್ರಮ ಆರಂಭವಾಯಿತು. ಶ್ರೀಮತಿ ರಮಾ ವಸಂತ ಅವರು ಗಾನ



ಮಾತಿಲ್ಲದೆ ಹಾಸ್ಯ ಯೋಗೇಶ್ ಅವರು ಮೈಮ್ ಮಾಡುತ್ತಿರುವುದು.



ಹಾಡಿನಲ್ಲಿ ಹಾಸ್ಯ - ಕಿರ್ಲೋಸ್ಕರ್ ಸತ್ಯ ಹಿನ್ನೆಲೆಯಲ್ಲಿ ಸುಬ್ಬರಾಮ್

ವಿನೋದಿನಿ ತಂಡದ ಕಲಾವಿದರಿಗೂ, ಸಭಿಕರೆಲ್ಲರಿಗೂ ಸ್ವಾಗತವನ್ನು ಬಯಸಿ ಎಂದೆಂದೂ ಬಾಡದ ಮಲ್ಲಿಗೆ ನಗೆ ಮಲ್ಲಿಗೆ ಇಂತಹ ಕಾರ್ಯಕ್ರಮಗಳು ಮುಂಬೈನ ಜನಜೀವನಕ್ಕೆ ಬಹಳ ಪರಿಣಾಮಕಾರಿ ಯಾಗುತ್ತದೆ ಎಂದರು.

ನಂತರ ಅಸೋಸಿಯೇಷನ್ನಿನ ಕಾರ್ಯದರ್ಶಿ ಗಳಾದ ಪ್ರಸಾದರವರು ಈ ಕಾರ್ಯಕ್ರಮವನ್ನು ಏರ್ಪಡಿಸುವ ಹಿನ್ನೆಲೆಯಬಗ್ಗೆ ಮಾತನಾಡುತ್ತಾ, ನಗುವಿಗೆ ಮಿಗಿಲಾದ ಔಷಧಿ ಮತ್ತೊಂದಿಲ್ಲ ಎಂಬುದು ಬರಿಯ ಗಾದೆಮಾತು ಎಂದು ತಿಳಿದರೆ ತಪ್ಪಾಗುವುದು. ಇತ್ತೀಚಿನ ಮೆಡಿಕಲ್ ರಿಸರ್ಚಿನಲ್ಲಿ, ನಾವು ನಕ್ಕಾಗ ನಮ್ಮದೇಹದಲ್ಲಿ ಕೆಲವು ಕೆಮಿಕಲ್‌ಗಳು ಉತ್ಪತ್ತಿ ಯಾಗುವುದೆಂದೂ, ಇವು ನಮ್ಮ ನೋವುಗಳನ್ನು ನಿವಾರಿಸಿ ನಮಲ್ಲಿ ಆನಂದವನ್ನೂ ಸ್ಫೂರ್ತಿಯನ್ನೂ ಮೂಡಿಸುತ್ತ ವೆಂದೂ ತಿಳಿದುಬಂದಿದೆ. ಆದ್ದರಿಂದ, ನಗುವಿಗೆ ಮಿಗಿಲಾದ ಔಷಧ ಮತ್ತೊಂದಿಲ್ಲ ಎಂಬುದು ನಿಜವಾದ ಮಾತು. ನಗುವುದು ಇಷ್ಟು ಸುಲಭವಾದ ಕೆಲಸವಾದರೂ, ನಮ್ಮಲ್ಲಿ ಅನೇಕರು ನಗುವುದೇ ಅಪರೂಪ. ನಾವು ನಮ್ಮ ಮನಸ್ಸಿನಲ್ಲಿ ನಮ್ಮ ಸುತ್ತಲೂ ಗೋಡೆಗಳನ್ನು ಕಟ್ಟಿಕೊಂಡಿದ್ದೇವೆ. ಆದ್ದರಿಂದ ನಮಗೆ ನಮ್ಮ ಸುತ್ತಮುತ್ತಲಲ್ಲಿ ಮತ್ತು ಅಕ್ಕಪಕ್ಕದಲ್ಲಿನಡೆಯುವ ನಗು ತರುವಂತಹ ಸನ್ನಿವೇಷಗಳು ಏನೂ ಪರಿಣಾಮ ಬೀರುವುದಿಲ್ಲ. ನಾವು ನಗಲು ಗಾನ ವಿನೋದಿನಿ ತಂಡದಂತಹ ಕಲಾಕಾರರನ್ನು ಆಶ್ರಯಿಸಬೇಕಾಗಿದೆ ಎಂದು ಹೇಳಿ, ಕಳೆದ ೨೫ ವರ್ಷಗಳಿಂದ ಜನರನ್ನು ತನ್ನ ಹಾಸ್ಯದ ಮೂಲಕ ರಂಜಿಸುತ್ತಾ ಬಂದಿರುವ ಗಾನ ವಿನೋದಿನಿಯ ಮುಖ್ಯಸ್ಥರಾದ ಸುಬ್ಬರಾಮು ಅವರನ್ನು ಮುಂದಿನ ಕಾರ್ಯಕ್ರಮವನ್ನು ನಡೆಸಿಕೊಡಲು ವಿನಂತಿಸಿದರು.

ಮೊದಲಿಗೆ ಮಾತಿನಲ್ಲಿ ಹಾಸ್ಯದ ಬಗ್ಗೆ ಎಂ. ಜ್ಞಾನಮೂರ್ತಿ ಅವರು ತಿಳಿಸಿದರು. ಭಾಷೆ ವ್ಯತ್ಯಾಸದಿಂದ, ಬೇರೆ ಬೇರೆ ಪ್ರದೇಶಗಳಲ್ಲಿ, ಒಂದೇ ಭಾಷೆಯಾದರೂ ಅದರ ಬಳಕೆಯಲ್ಲಿ ವ್ಯತ್ಯಾಸಗಳಿರುವುದರಿಂದ ಆಗುವ ಹಾಸ್ಯಮಯ ಸನ್ನಿವೇಶಗಳನ್ನು ಅವರು ತೋರಿಸಿದರು.



ರೇಡಿಯೋ ಪ್ರಸಂಗ

ಉದಾಹರಣೆಗೆ, ಅಮ್ಮನನ್ನು mum ಎನ್ನುವ ಮಗು, ಚಿಕ್ಕಮ್ಮ ಮತ್ತು ದೊಡ್ಡಮ್ಮನನ್ನು ಏನು ಕರೆಯುತ್ತೀಯ ಎಂದಾಗ minimum ಮತ್ತು maximum ಎನ್ನುತ್ತದೆ.

ಮೈಮಿಂಗ್ (miming) ಅಥವಾ ಮಾತಿಲ್ಲದೇ ಹಾಸ್ಯವನ್ನು ಸಾದರ ಪಡಿಸಲು ಅವರು



ಧರ್ಮ ರತ್ನಾಕರ ನಾಟಕದ ಪ್ರಸಂಗ - ಅಧ್ಯಕ್ಷರ ಪಾತ್ರದಲ್ಲಿ ಸುಬ್ಬರಾಮು



ಇಂಪ್ರಜಾಲ - ಕಲಾವಿದ ಮಂಜುನಾಥ ಹಿರೇಮಠ,
ಪಕ್ಕದಲ್ಲಿ ಪ್ರೇಕ್ಷಕರು

ರಂಗದ ಮೇಲೆ ಬಂದರು. ಓರ್ವ ಸ್ತ್ರೀ ಅಲಂಕಾರ ಮಾಡಿ ಕೊಳ್ಳುವುದನ್ನೂ ಮತ್ತು ಆ ಸನ್ನಿವೇಶದಲ್ಲಿ ಉಂಟಾಗುವ ಹಾಸ್ಯವನ್ನೂ ಮಾತಿಲ್ಲದೆ, ತನ್ನ ಹಾವಭಾವಗಳ ಮೂಲಕ ಎಲ್ಲರಿಗೂ ಮನ ಮುಟ್ಟುವ ಹಾಗೆ ತೋರಿದರು.

ಹಾಡಿನಲ್ಲಿ ಅಥವಾ ಪದ್ಯ ದಲ್ಲಿ ಹಾಸ್ಯವನ್ನು ತೋರಿಸಲು ಕಿರ್ಲೋಸ್ಕರ್ ಸತ್ಯ ಅವರು ಇದಾದನಂತರ ಬಂದರು. ನಾಟಕ ಆಡಿಸಲು




ಘನವಿದ್ವಾಂಸರು ಹಾಡುತ್ತಿದ್ದಾರೆ,
ಪಕ್ಕದಲ್ಲಿ ಶಿಷ್ಯರು ಮತ್ತು ನಿರ್ವಾಹಕರು

ಹೋಗಿ ತಾನು ಪಟ್ಟ ಸಂಕಟವನ್ನು ವಿವರಿಸುವ ಹಾಡೊಂದನ್ನು ಸುಂದರವಾಗಿ, ಸ್ಪಷ್ಟವಾಗಿ ಹಾಡಿ, ಅಭಿನಯಿಸಿದರು. ಇದೇ ರೀತಿ, ಹಬ್ಬದ ಹಿಂದಿನ ದಿನ ಮಾರ್ಕೆಟಿಗೆ ಹೋದರೆ ಆಗುವ ಅನುಭವವನ್ನು ವರ್ಣಿಸುವ ಮತ್ತೊಂದು ಹಾಸ್ಯ ಗೀತೆಯನ್ನೂ ಸುಂದರವಾಗಿ ಹಾಡಿದರು.

ನಕಲು ಮಾಡುವುದರಲ್ಲಿ ಹಾಸ್ಯ ಅಂದರೆ mimicry ಮುಂದಿನ ಪ್ರಸಂಗವಾಗಿತ್ತು. ನಾಯಿ ಬೆಕ್ಕುಗಳ ಕೂಗು, ನವಜಾತ ಶಿಶುವಿನ ಅಳುವಿಕೆ ಇತ್ಯಾದಿಯನ್ನು ಹಾಸ್ಯಮಯ ಹಿನ್ನೆಲೆಯಲ್ಲಿ ನಕಲು ಮಾಡಿ ಎಲ್ಲರನ್ನೂ ನಗಿಸಿದರು.

ಹಾಸ್ಯ ಎಲ್ಲಿ ಬೇಕಾದರೂ, ಯಾವ ಸನ್ನಿವೇಶದಲ್ಲೂ ಮೂಡಿಬರಬಹುದು. ಇದನ್ನು ಎತ್ತಿ ತೋರಿದ್ದು ಮುಂದಿನ ಪ್ರಸಂಗ. ಮಹಿಳಾ ಮಂಡಲಿಯಲ್ಲಿ ಮೀಟಿಂಗಿಗೆ ಹೋಗುವ ಪತ್ನಿ, ಗಂಡನಿಗೆ ರೇಡಿಯೋದಲ್ಲಿ ಬರುವ ಹೊಸ ರುಚಿಯನ್ನು ಕೇಳಿ ಬರೆದಿಟ್ಟುಕೊಳ್ಳುವಂತೆ ಹೇಳಿದ್ದಾಳೆ. ಆದರೆ, ಗಂಡ ರೇಡಿಯೊ ಹಾಕಿದಾಗ ಎರಡು ಸ್ಟೇಷನ್‌ಗಳು ಒಟ್ಟಿಗೆ ಬಂದು, ಸ್ವಲ್ಪ ಇದು ಮತ್ತು ಸ್ವಲ್ಪ ಅದು, ಎಂಬಂತೆ ಕೇಳಿಬರುತ್ತವೆ. ಒಂದರಲ್ಲಿ ಹೊಸರುಚಿ,




ಅಸೋಸಿಯೇಷನ್ನಿನ ಕಾರ್ಯದರ್ಶಿ ಪ್ರಸಾದ್ ಗಾನ ವಿನೋದಿನಿಯ ಕಲಾವಿದ ಶ್ರೀ ಸುಬ್ಬರಾಮು ಅವರಿಗೆ ಸ್ಮರಣಿಕೆ ಕೊಡುತ್ತಿರುವುದು.

ಮತ್ತೊಂದರಲ್ಲಿ ಯೋಗಭ್ಯಾಸದ ಶಿಕ್ಷಣ. ಎಣ್ಣೆ ಕಾದಿದೆಯಾ ಎಂದು ನೋಡಲು ಎಂದು ಹೊಸ ರುಚಿಯ ಕಾರ್ಯಕ್ರಮ ದಿಂದ ಕೇಳಿಬಂದ ನಂತರ ಐದು ಬೆರಳುಗಳನ್ನೂ ಒಳಗಿಡಬೇಕು ಎಂದು ಯೋಗಭ್ಯಾಸದ ಕಾರ್ಯಕ್ರಮ ದಿಂದ ಕೇಳಿಬರುತ್ತದೆ. ಇದನ್ನು ಕೇಳಿದ ಆ ಗಂಡನ ಪಾಡೇನಾಗಿರಬೇಕು ಮತ್ತು ಅವನು ಬರೆದು ಕೊಂಡ ನೋಟ್ಸ್ ಹ್ಯಾಗಿದ್ದಿರಬೇಕು?

ಸಿನೆಮಾ ನೋಡುವಾಗ ಪ್ರೇಕ್ಷಕರ ನಡವಳಿಕೆ ವಿಚಿತ್ರವಾಗಿರುತ್ತದೆ. ಕೆಲವರು ತೂಕಡಿಸಿದರೆ, ಮತ್ತೆ ಕೆಲವರು ಚೆನ್ನಾಗಿ ನಿದ್ದೆ ಹೊಡೆಯುತ್ತಾರೆ. ಅನೇಕರು ಅದು ಸಿನೆಮಾ ಅನ್ನೋದನ್ನ ಮರೆತು ಅದರ ಭಾವನೆಗಳಲ್ಲಿ ತಲ್ಲೀನರಾಗಿಬಿಡುತ್ತಾರೆ. ದುಃಖದ ಸನ್ನಿವೇಶ ಬಂದರೆ ಇವರ ಕಣ್ಣಿನಲ್ಲಿ ಧಾರಾಕಾರವಾದ ಪ್ರವಾಹ. ಖಳನಾಯಕನೊಡನೆ ನಾಯಕನ ಹೊಡೆದಾಟದ ಸನ್ನಿವೇಶದಲ್ಲಿ ಇವರೂ ಗಾಳಿಯನ್ನು ಗುದ್ದುತ್ತಾರೆ. ಖಳನ den ನಲ್ಲಿ cabaret ಯ ಸನ್ನಿವೇಶ ಬಂದಾಗ?... ಈರೀತಿಯ ಓರ್ವ ಸಿನೆಮಾ ಪ್ರೇಮಿಯು ಸಿನೆಮಾನೋಡುವಾಗ ಅಕ್ಕಪಕ್ಕದಲ್ಲಿರುವ ಪ್ರೇಕ್ಷಕರ ಗತಿ?

ಈ ಸಂದರ್ಭದ ಹಾಸ್ಯವನ್ನು ಸುಂದರವಾಗಿ

(ಪುಟ 7ಕ್ಕೆ)

## AN ODE TO THE SPIRIT OF MUMBAIITES

We bring here a poem doing rounds in Internet, credited to be authored by Ms. Urmila Shah, which brings out beautifully the travails and tribulations of Mumbaiites during the recent flooding. (To be sung to the tune of Hindi film song " Ai Malik Tere Bandhe Hum" from the film " Do Anken Bara Haath " )

Hey Mumbai tere bandhe hum,
Yeh kaise, kyun hum-par situm,
Na railways chale, na BEST chale,
Paidal chalte huwe nikle dum.
Hey Mumbai tere bandhe hum ...

Waise office se jaldi nikle hum,
Jamke station thak badhaaye kadam,
Hum khade the magar, gaadi ki na khabar,
Toota ummeed ka papaddum.
Aake baahar jab pheri nazar,
Dekha Bambai bana tha gutter,
Na auto chale aur na taxi rukhe,
Ab kaise karenge safar.
Hey Mumbai tere bandhe hum ...

Hua baarish se yun saamna,
Na kahin bijali, koi phone na,
MTNL kho gaya, Ambani bhi so gaya,
Andhere mein hamein chod diya,
Cell-phone bhi kare gadbadam,

Yeh kaisa bada sankatam,
Bhejemein fikr aur kuch na clear,
Bheeg ke tan man hua bahut naram.
Hey Mumbai tere bandhe hum ...

Thoda rukh ke maine saans li,
Yaad aane laga family,
Biwi tum ho kidhar, bachhee hain kya udhar,
Ya kahin phas jaayenge raat-bhar
Ab kaise karenge aur sabr,
Kare koi na aisa suffer,
Mere dilmein fear, aankhonmein tear,
Tension chadne laga ekdum.
Hey Mumbai tere bandhe hum ...

Chal pada public-ka caravan,
Girne walonko kiya saavdhaan,
Hum chalte rahe, saath bhadte rahe,
Door manzil, kadi imtihan.
Man-holes bhi khule the idhar-udhar,
Upar thunder, neeche bhi no cover,
Drainage-ke tale khaddepe gire,
BMC bhi bada be-sharam.
Hey Mumbai tere bandhe hum ...

Yeh meteorology jaaye bhaadmein,
Saara metro dubaa paanimein,
Koi Shanghai kahe, future Hong-Kong kahe,
Yaaron unko hum paagal kahe,
Yeh hota hai year after year,
Kab sudhrega apna shahar,
Na Government sune, na bhagwan sune,
Rothe thairthe aa pahuncha main ghar.
Hey Mumbai tere bandhe hum!

**GOD SAVE MUMBAI**

# ರಾಮ ಧಾನ್ಯ ಚರಿತ್ರೆ

- ಶ್ರೀಮತಿ ಸುಮನ್ ಕೆ. ಚಿಪ್ಳೂಣ್‌ಕರ್

ನಾಡಿನ ಪುಣ್ಯದ ಫಲವಾಗಿ ಮಹಾಕವಿಯೊಬ್ಬನು ಉದಯಿಸುತ್ತಾನೆ. ಅಂತಹ ಪುಣ್ಯವಿದ್ದುದರಿಂದಲೇ ಕನಕದಾಸರಂತಹ- ಸಂತಕವಿಯನ್ನು ಕಾಣುವ ಭಾಗ್ಯ ಕನ್ನಡ ನಾಡಿಗೆ ಲಭ್ಯವಾಯಿತು.

'ರಾಮ ಧಾನ್ಯ ಚರಿತ್ರೆ' ಅಥವಾ 'ರಾಘವ ಧಾನ್ಯ ಚರಿತ್ರೆ' ಎಂಬುದು ಕನಕದಾಸರ ಪುಟ್ಟ ಕಥನ ಕಾವ್ಯ. ಇದು ಭಾಮಿನಿ ಷಟ್ಪದಿಯಲ್ಲಿದ್ದು, ಇದರಲ್ಲಿ 'ವರ ಪುರದ ಚೆನ್ನಿಗರಾಯ' ಎಂಬ ಅಂಕಿತವಿದೆ. 158 ಚರಣಗಳುಳ್ಳ 'ರಾಮ ಧಾನ್ಯ ಚರಿತ್ರೆ' ಯು ರಾಮಾಯಣದ ಕಥೆಯೂ ಹೌದು, ಧಾನ್ಯದ ಕಥೆಯೂ ಹೌದು. ಕಾರಣವೆಂದರೆ, ರಾಮಾಯಣದ ಭಕ್ತಿ ಪುರಸ್ಸರವಾದ ಕಥೆಯ ಮಧ್ಯದಲ್ಲೇ ವಿವಾದವೂ ಸೇರಿಕೊಂಡಿದೆ.

ಇದರ ಮೂಲ ಯಾವ ಪುರಾಣದೊಳಗಿನದು ಎಂಬುದು ಸ್ಪಷ್ಟಗೊತ್ತಾಗುವುದಿಲ್ಲ. ಇತಿಹಾಸವೆಂದರೆ ವಿಜಯನಗರದ ವ್ಯಾಸರಾಯರ ಮಠದಲ್ಲಿದ್ದ ವ್ಯಾಸಕೂಟವು ಸಂಸ್ಕೃತವನ್ನು ಶ್ರೇಷ್ಠ ಭಾಷೆಯೆಂದು ಪರಿಗಣಿಸಿದರೆ ದಾಸಕೂಟವು ಕನ್ನಡ ಭಾಷೆಯನ್ನು ಶ್ರೇಷ್ಠವೆಂದು ಭಾವಿಸುತ್ತಿತ್ತು. ಶ್ರೀಸಾಮಾನ್ಯರಿಗೆ ಸಂಸ್ಕೃತ ಭಾಷೆ ಗಗನ ಕುಸುಮವಾಗಿದ್ದರೂ ಕನ್ನಡವೇ ಮೊದಲಾದ ದೇಶ ಭಾಷೆ ಗಳಿಗೆ ಅದು ಸುರಧೇನುವಿನಂತೆ ಅಮೃತ ಧಾರೆಯನ್ನೆರೆದು ಪೋಷಿಸಿ ಎಂಬ ತಥ್ಯ ಗಮನಿಸುವಂತಹುದು ಎಂಬ ಸಮನ್ವಯ ಭಾವನೆಯನ್ನು ಗುರು ವ್ಯಾಸರಾಯರು ತಳೆದಿದ್ದರು. ಹೀಗಿದ್ದರೂ ಜನಪರವಾದ ಕನ್ನಡ ಭಾಷೆಯನ್ನೂ ಬಳಸಬೇಕು ಎಂಬ ತೂಕದ ವಿಚಾರಗಳನ್ನಿಟ್ಟುಕೊಂಡ ಕನಕದಾಸರು 'ರಾಮ ಧಾನ್ಯ ಚರಿತ್ರೆ' ಯಲ್ಲಿ ಭತ್ತ ರಾಗಿಗಳ ರೂಪಕಗಳಿಂದ ವಾದ ಮಂಡಿಸಿ ಎರಡೂ ಭಾಷೆಗಳ ಮಹತ್ವ ಹೃದ್ಯೋಚರವಾಗುವಂತೆ ಮಾಡಿರಬಹುದು ಎಂಬೂ ಊಹೆಯೂ ಇದೆ ಇಂತಹ ಕುತೂಹಲಕಾರಿ ಕಥೆಯನ್ನೊಳಗೊಂಡಿದೆ. ಕನಕದಾಸರ ಕೃತಿ 'ರಾಮ ಧಾನ್ಯ ಚರಿತ್ರೆ'. ಇದರಲ್ಲಿ ಭತ್ತಕ್ಕೆ 'ವ್ರೀಹಿ'. ಎಂದು ಸಂಸ್ಕೃತದಲ್ಲೂ, ರಾಗಿಗೆ ನರೆದಲೆಗ ಎಂದು ಶುದ್ಧ ಕನ್ನಡದಲ್ಲೂ ಕರೆದಿದೆ. ರಾಗಿ ಬಲಿತು ಕೊಯ್ಲಿಗೆ ಸಿದ್ಧವಾದಾಗ ಅದರ ತೆನೆ ಬೆಳಗಾಗುತ್ತೆ. ಅದರಿಂದಲೇ ನರೆತ ತಲೆಯವನನ್ನು ನರೆ ದಲೆಗ ಎಂದು ಕರೆದಿರುವುದು.

'ರಾಮ ಧಾನ್ಯ ಚರಿತ್ರೆ' ಯ ಕಥೆ ಹೀಗಿದೆ. ಮಹಾಭಾರತದಲ್ಲಿ, ಧರ್ಮರಾಯನು ಜೂಜಿನಲ್ಲಿ ಸೋತ ಸಂದರ್ಭದಲ್ಲಿ ತನ್ನ ತಮ್ಮಂದಿರೊಂದಿಗೆ ಕಾಮ್ಯಕವನಕ್ಕೆ ತೆರಳಿದಾಗ ಶಾಂಡಿಲ್ಯ ಮುನಿಗಳು ಪಾಂಡವರನ್ನು ಕಾಣಲು ಬಂದರು. ಹಾಗೂ ಧರ್ಮಜನಿಗೆ ಸಿರಿ ದರಿದ್ರತೆಗಳು ನಿಲದು ಪರಿಹಾರ ವಹುದು ಎಂದು ಧೈರ್ಯ ಹೇಳುತ್ತ ಭೂರಿ ಸತ್ಯವ್ರತನೂ, ಗುಣಹಾರನೂ ಆದ ಶ್ರೀರಾಮನೂ ಸಹ ವನವಾಸದಲ್ಲಿರಬೇಕಾಯಿತು. ಕಷ್ಟ ಪರಂಪರೆಗಳಿಗೆ ತುತ್ತಾಗಬೇಕಾಯಿತು. ಅಂತಹ ಸ್ಥಿತಿಯಲ್ಲೂ ನರೆದಲೆಗ ಮತ್ತು ವ್ರೀಹಿ ಇವರ ನಡುವೆ ಶ್ರೇಷ್ಠತೆ ಬಗೆಗೆ ವಾದ ನಡೆದಾಗ ಅವರಿಗೂ ಯೋಗ್ಯ ನ್ಯಾಯವಿತ್ತನು, ಎನ್ನಲು ಧರ್ಮಜನು ರಾಮಕಥೆಯನ್ನು ಕೇಳಲು ಉತ್ಸುಕನಾದನು. ಶಾಂಡಿಲ್ಯ ಮುನಿಗಳು ರಾಮ ಕಥೆಯನ್ನು ರಾಮಜನ್ಮದಿಂದ ಪ್ರಾರಂಭಿಸಿ, ಅವನು ಧನುರ್ಧರನಾದಾಗ ತಾಟಕಿ, ಮಾರೀಚ, ಸುಬಾಹುಗಳನ್ನು ಸಂಹರಿಸಿ, ಅಹಲ್ಯಾ ಉದ್ಧಾರಗೈದು, ಮಿಥಿಲಾಪುರಕ್ಕೆ ತೆರಳಿ ಶಿವಧನಸ್ಸನ್ನು ಮುರಿದು, ಸೀತೆಯನ್ನು ವರಿಸಿದನೆಂದೂ, ಮುಂದೆ ಶ್ರೀರಾಮನಿಗೂ ವಿಪಿನಾಲಯದ ಸಿರಿ ಸಂಭವಿಸೆ ವನವಾಸದಲ್ಲಿದಾಗ ಸೀತೆಯ ಅಪಹರಣವಾಗಿ ಜಟಾಯುವಿನಿಂದ ಸಂಗತಿ ತಿಳಿದು, ದಕ್ಷಿಣಕ್ಕೆ ತೆರಳಲು ವಾಲಿಯನ್ನು ನಿಗ್ರಹಿಸಿ, ಸುಗ್ರೀವ ಹನುಮಂತರ ಸಹಾಯದಿಂದ ಲಂಕೆಗೆ ತೆರಳಿ ರಾವಣ ಕುಂಭಕರ್ಣನನ್ನು ಸಂಹರಿಸಿದನೆಂದೂ, ಪತ್ನಿ ಸೀತೆಯನ್ನು ಬಂಧಮುಕ್ತಗೊಳಿಸಿ, ವಿಭೀಷಣನಿಗೆ ಪಟ್ಟಕಟ್ಟಿದನು. ನಂತರ ಪತ್ನಿ ಸೀತೆ, ತಮ್ಮ ಲಕ್ಷ್ಮಣ, ವಿಭೀಷಣ, ಕರಿ, ರಥ, ತುರಗ, ಪಾಯ್ದಳ ಹನುಮಂತ, ವಾನರ ಸೇನೆ ಮತ್ತು ವೀರ ದಾನವರೊಂದಿಗೆ ಹಿಂತಿರುಗುತ್ತ ರಾಮೇಶ್ವರಕ್ಕೆ ಬಂದು ಶಿವಪೂಜೆಗೈದು, ವಾಲ್ಮೀಕಿ ಆಶ್ರಮದಲ್ಲಿ ಮುನೀಶ್ವರರನ್ನು ಸತ್ಕರಿಸಿ ಮುಂದೆ ಪಂಚನದಿಗಳ ಮಧ್ಯದಲ್ಲಿ ಹಚ್ಚಹಸಿರಾಗಿ ವನಗಳಿಂದ ಶೋಭಿತ, ಫಲವಸ್ತುಭರಿತ ವಾದ ಮುಚುಕುಂದ ಮುನಿಯ ಆಶ್ರಮಕ್ಕೆ ಬಂದು, ಶ್ರೀರಾಮನ ಪಾಳೆಯ ಬೀಡುಬಿಟ್ಟಿತು. ಅಲ್ಲಿ ಶ್ರೀರಾಮ ಒಡ್ಡೋಲಗ, ಪಾಳೆಯದ ಗುಡಿಗುಡಾರಗಳು ರಾರಾಜಿಸಿದವು.

ರಘು ಕುಲೋತ್ತಮನನ್ನು ಕಾಣಲು ಕೌಶಿಕ, ಜಮದಗ್ನಿ, ಜಹ್ನು, ಪರಾಶರ, ಜಾಬಾಲಿ, ಭೃಗು, ದೂರ್ವಾಸ ಗೌತಮಾದಿ ಸಮಸ್ತ ಮುನಿವರರು ಬಂದು ಗಂಧಾಕ್ಷತೆಯಿಂದ ಶ್ರೀರಾಮನನ್ನು ಹರಸಿದರು.

ಶ್ರೀರಾಮನು ಸಿಂಹಾಸನದಲ್ಲಿ ವಿರಾಜಿಸಲಾಗಿ ಎಡದಲ್ಲಿ ಕಪಿಕುಲೇಂದ್ರನೂ, ಬಲದಲ್ಲಿ ವಿಭೀಷಣ, ಎದುರು ಮುನಿಶ್ರೇಷ್ಠರು, ಹಿಂದೆ ವಾನರರು ಹೀಗೆ ಓಲಗದಲ್ಲಿ ಶೋಭಿಸಲಾಗಿ, ಸೀತೆ ಲಕ್ಷ್ಮಣರು ಚಾಮರ ಬೀಸುತ್ತಿರುವಾಗ ನೆರೆದ ಮಹಾಮುನೀಶ್ವರರು ಬೆಲ್ಲ, ಸಕ್ಕರೆ, ಜೇನು ತುಪ್ಪ ಮುಂತಾದ ರಸಾಯನಗಳಲ್ಲಿ 'ಭಿಲ್ಲವಿಸಿ' ರಚಿಸಿದ ಸುಭಕ್ಷ್ಯಗಳನ್ನು ಹೆಡಗೋಳಲ್ಲಿ ತುಂಬಿ ತಂದಿರಿಸಿದರು. ರಘುನಂದನನು ತನ್ನ ನಿಜಬಲದೊಂದಿಗೆ ಸುಭಕ್ಷ್ಯಗಳನ್ನು ಸೇವಿಸಲು ರಾಮನು ಹನುಮಂತನಿಗೆ ನಿನಗೆ 'ರುಚಿಸಿತೆ?' ಎನಲು, ಹನುಮಂತನು ತನಗೆ ಧಾನ್ಯಗಳನ್ನು ವೀಕ್ಷಿಸಬೇಕೆಂದನು.

ರಾಮನೃಪಾಲನ ಆಜ್ಞೆಯಂತೆ- ನರೆದಲೆಗ ನೆಲ್ಲು(ಭತ್ತ) ಹಾರಕ, ಬರಗು, ಜೋಳ, ಸಾಮೆ, ನವಣೆ ಗೋಧಿ, ಮುಂತಾದ ನವಧಾನ್ಯ ಗಳನ್ನು ರಾಶಿ ಹಾಕಿದರು. ಈ ಧಾನ್ಯಗಳಲ್ಲಿ 'ಪರಮ ಸಾರದ ಹೃದಯ ನಾರು?' ಎಂದು ಕೇಳಲು ಕೆಲವರು ಗೋಧಿ ಎಂದೂ ಕೆಲವರು ಸಾಮೆಜೋಳವೆಂದೂ ಮತ್ತೆ ಕೆಲವರು ಭತ್ತ ನರೆದಲೆಗನೆಂದರು. ಆಗ ಶ್ರೀರಾಮನು ಹಲವು ಮತಗಳೇಕೆ? ಶ್ರೇಷ್ಠವಾದ ಒಂದೇ ಒಂದು ಧಾನ್ಯವಾವುದು? ಎಂದು ಕೇಳಲು ಗೌತಮ ಮುನಿಯು

'ದಾಶರಥಿ ಚಿತ್ತೈಸು! ನಮ್ಮ ದೇಶಕತಿಶಯ ನರೆದಲೆಗನೇ' ಎನಲು,

ಸಿಡಿದೆದ್ದ ವ್ರೀಹಿ- 'ಎಲ್ಲ ಧರ್ಮದ ಸಾರವನ್ನು ಬಲ್ಲ ನೀವು ಅಜ್ಞರಂತೆ ನುಡಿವುದು ತರವಲ್ಲ. ನೆಲ್ಲು, ನಾನಿರೆ, ಗೋಧಿ ಮೊದಲಾದ ಧಾನ್ಯಗಳಿರಲು, ಇದರಲ್ಲಿ ಬಲ್ಲಿದನು ನರೆದಲೆಗನೆಂಬುದಿದಾವ ಮತ? ಎಂದು ದಿಟ್ಟಿಸಿ ನುಡಿದನು. ಮತ್ತು ನರೆದಲೆಗನನ್ನು ತರಾಟೆಗೆ ತೆಗೆದುಕೊಂಡನು. ಎನೆಲವೂ ನರೆದಲೆಗ, ನೀನು ಸಮಾನನೇ ಎನಗೆ? ಕುಲಹೀನ, ಮತಿಹೀನ, ಬುಧರು ಜರೆದು ನಿರಾಕರಿಸಿ ಬಿಡಲಂತು ನೀ ಶೂದ್ರನ್ನವಾದೆ ಯಲಾ ಬಾಹಿರ, ನಡೆ, ಸಾಕು ಎಂದು ಜರೆದು ಜಂಕಿಸಿ ನುಡಿದನು. ಹಾಗೂ ತನ್ನ ಮಹಿಮೆ ಯನ್ನು ಕೊಚ್ಚಿಕೊಳ್ಳ ತೊಡಗಿದನು.

ಕ್ಷಿತಿಯ ಅಮರರು ಉಪನಯನದಲಿ, ಸುವ್ರತ ಸುಭೋಜನದಲಿ, ಪರಮ ಮಂತ್ರಾಕ್ಷತೆಗಳಲಿ, ಶುಭ ಕಾರ್ಯಗಳಲ್ಲಿ, ಆರತಿಯಲಿ, ಕ್ರತುಗಳೆಡೆಯಲಿ, ಅರಮನೆಯಲಿ, ದೇವರಿಗತಿಶಯವಾದ ನೈವೇದ್ಯದಲಿ, ಬ್ರಹ್ಮರ ಸಮಾರಾಧನೆಯಲಿ, ವಿದ್ಯಾರಂಭದಲಿ, ಹರಿ ಉಪಾಸನೆಗಳಲ್ಲಿ, ಹೊಸ ಮನೆಯ ಪೂಜಾರ್ಚನೆಯಲಿ, ಮದುಮಕ್ಕಳಿಗೆ ಸೇಸೆ ಇಡುವಲ್ಲಿ, ಗಂಧಾಕ್ಷತೆ ಯಿಂದೆಸೆವ ವಿಪ್ರರ ಫಾಲದಲಿ, ನಾನು ಮೆರೆಯುತ್ತೇನೆ.

ಅಲ್ಲವೋ, ಪರಿಮಳದ ಚಂದನದ ತರುವಿಗೆ ಸಮವೇ ಒಣಗಿದ ಕಾಷ್ಠ ಗೋವಧು ಕರೆದ ಹಾಲಿಗೆ ಕುರಿಯ ಹಾಲಾಂತರವೇ? ಪರಮಸಾಹಸವೀರ ಹನುಮಗೆ ಮರದ ಮೇಲಣ ಕಪಿಯು ಸಮನೇ? ಸುರನದಿಗೆ ಕಾಡು ಹಳ್ಳ ಸರಿಯೇ? ಗರುಡನ ಮರಿಗೆ ಹದ್ದಿನ ಮರಿ ಸಮವೇ? ಹಂಸೆಗೆ ಬಕನು

ಹೋಲುವುದೇ? ಮರಿ ಕೋಗಿಲೆಗೆ ಕಾಗೆ ಮರಿಯು ಜೋಡಿಯೇ? ನರೆದಲೆಗ, ಸಾಕಿನ್ನು ನೀನಾವ ಮಾನ್ಯನು?

ವ್ರೀಹಿ ಭಾಷಣದ ನಂತರ ನರೆದಲೆಗನ ಸರದಿ. ಸಭಾಮಧ್ಯದಲ್ಲಿ ಎದ್ದು ನಿಂತು ನರೆದಲೆಗ ತನ್ನ ಮಾತಿನ ಬಾಣಗಳನ್ನು ಪುಂಖಾನುಪುಂಖವಾಗಿ ಬಿಟ್ಟ.

ನುಡಿಗೆ ಹೇಸದ ಭಂಡ, ನಿನ್ನೊಳು ಕೊಡುವೇ ಮರುತ್ತರವ? ಕಡು ಜಡನಲಾ, ಸತ್ವಹೀನನು ನೀನು ಬಡವರ ಕಣ್ಣೆತ್ತಿ ನೋಡೆ, ಧನಾಢ್ಯರನ್ನು ಬೆಂಬತ್ತಿ ನಡೆವುದಪೇಕ್ಷೆ ನಿನ್ನದು. ಬಾಣಂತಿಯರಿಗೆ, ರೋಗಿಗೆ, ಪಥ್ಯ ನೀನಹೆ. ಹೆಣದ ಬಾಯಿಗೆ ತುತ್ತು. ಇಂತಹವನಾದ ನಿನ್ನ ಜನ್ಮ ವ್ಯರ್ಥ. ಮಳೆದೆಗೆದು, ಬೆಳೆಯಡಗಿ ಕ್ಷಾಮದ ವಿಳಯ ಕಾಲದೊಳನ್ನವಿಲ್ಲದ ಅಳಿವ ಪ್ರಾಣಿಗಳನಾದರಿಸಿ ಸಲಹಿದವನು ನಾನು, ನೀನಲ್ಲ. ಬಡವ ಬಲ್ಲಿದ ಎಂಬ ಪಕ್ಷಪಾತ ನಿನ್ನಲ್ಲಿದೆ. ನನ್ನಲ್ಲಿಲ್ಲ. ನಾನು ಸಮದರ್ಶಿ, ನೀನು ಸತ್ತವರ ಪ್ರತಿಬಿಂಬ, ಹೆಚ್ಚೇನು, ನಿನ್ನೊಡನೆ ವಾದ ಉಚಿತವಲ್ಲ.

ಇತ್ತಂಡಗಳಲ್ಲೂ ವಿದ್ವೇಷ ಹೆಚ್ಚಿ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರುವುದನ್ನು ಕಂಡ ಶ್ರೀರಾಮನು ಇಬ್ಬರನ್ನೂ 6-7 ತಿಂಗಳು ಸೆರೆಯಲ್ಲಿಡುವಂತೆ ಆಜ್ಞಾಪಿಸಿದನು. ಗೌತಮ ಮುನಿಗಳು ಅವರಿಬ್ಬರನ್ನೂ ಸೆರೆಯಲ್ಲಿಟ್ಟರು.

ಇತ್ತ ಶ್ರೀರಾಮನು ಭರತ, ಶತ್ರುಘ್ನರ ಬರವಿಗಾಗಿ ಹಾತೊರೆದಿರುವರೆನ್ನುತ ತನ್ನ ಸಮಾಚಾರ ತಿಳಿಸಲು ಹನುಮಂತನನ್ನು ಮುಂದಾಗಿ ಕಳಿಸಿದನು. ಶ್ರೀರಾಮನ ಬರವು ತಿಳಿದು ಆನಂದ ತುಂದಿಲರಾದ ಅವರು ಮಾತೆಯರಿಗೆ ಈ ಆನಂದ ವಾರ್ತೆಯನ್ನು ತಿಳಿಸಿ ಅಯೋಧ್ಯೆಯನ್ನು ಶೃಂಗರಿಸಲು ಆಜ್ಞೆ ಹೊರಡಿಸಿದರು.

ದೊಡ್ಡ ಜಯಘೋಷ, ಕೊಂಬು, ಕಹಳೆಗಳು ಚೀರಲು ಕರಿ, ತುರಗ, ರಥಗಳಲ್ಲಿ ಆಗಮಿಸಿದ ಶ್ರೀರಾಮ ಲಕ್ಷ್ಮಣರು ತಾಯಂದಿರ ಕಾಲಿಗೆ ನಮಸ್ಕರಿಸಿ ತಮ್ಮಂದಿರನ್ನು ಆನಂದಾಶ್ರುಗಳಿಂದ ಬಿಗಿದಪ್ಪಿದರು.

ಅನಂತರ ಸಕಲರೂ ಎದುರ್ಗೊಳ್ಳುತ್ತಿದ್ದ ಶ್ರೀರಾಮನ ಪಟ್ಟಾಭಿಷೇಕವು ಸಕಲ ಸುರಜನ, ಮುನಿಜನರ ಸಮಕ್ಷಮದಲ್ಲಿ ವಿಜೃಂಭಣೆಯಿಂದ ಜರಗಿತು.

ಮರುದಿನವೇ ಶ್ರೀರಾಮನು ಗೌತಮರಿಗೆ ವಾದಿ ಪ್ರತಿವಾದಿಗಳಾದ ವ್ರೀಹಿ-ನರೆದಲೆಗರನ್ನು ಅಯೋಧ್ಯೆಗೆ ಕರೆತರಲು ಬಿನ್ನವಿಸಿದನು. ತ್ರಿಮೂರ್ತಿಗಳಾದ ಬ್ರಹ್ಮ ವಿಷ್ಣು ಮಹೇಶ್ವರರನ್ನು ಸಕಲ ಮುನಿಜನರನ್ನು ಕರೆಸಿ ಓಲಗದಲ್ಲಿ ನ್ಯಾಯ ನೀಡಲು ಶ್ರೀರಾಮನು ಸಿದ್ಧನಾದನು.

ಗೌತಮರು ನರೆದಲೆಗ ಹಾಗೂ ವ್ರೀಹಿಯೊಂದಿಗೆ ಅಯೋಧ್ಯೆಗೆ ಆಗಮಿಸಿದರು. ಆ ಇಬ್ಬರೂ ವಾದಿ ಪ್ರತಿವಾದಿಗಳನ್ನು ಸಾರ್ವಭೌಮನು ವಿಚಾರಣೆಗೆ ಒಳಪಡಿಸಿದನು.

ಪರೀಕ್ಷಿಸಲಾಗಿ, ಸಾರ ಹೃದಯ ನರೆದಲೆಗನು ಗಟ್ಟಿಗನಾಗಿಯೇ ಕಂಡನು. ಆದರೆ ವ್ರೀಹಿ ಆ ಏಳು ತಿಂಗಳಲ್ಲಿ ನಿಸ್ಸಾರಗೊಂಡು, ಕಾಂತಿಹೀನನಾಗಿ ಕರಗಿ ಹೋದಂತಿದ್ದನು.

ನರೆದಲೆಗನ ಗಟ್ಟಿಗತನವನ್ನು ಶ್ರೀರಾಮನು ಕೊಂಡಾಡಲು ನಾರದರು-

ಅಹುದು ಸುರಪನ ಮಾತು ನಿಶ್ಚಯ
ವಹುದು ನರೆದಲೆಗನೇ ಸಮರ್ಥನು
ಬಹಳ ಬಲಯುತ ಸೆರೆಗೆ ತಳಲು ಕಾಂತಿಗೆಡಲಿಲ್ಲ
ಸಹಜವಿದು ವರಪಕ್ಷವಾದಡೆ
ವ್ರೀಹಿ ಕರಗಿ ಕಂದಿದನು ಸೆರೆಯಲಿ
ವಿಹಿತವದು ಕೇಳೆಂದ ನಾರದ ನುಡಿದವನಸು
ನಗುತ್ತ

ಎಲ್ಲ ಮುನಿಗಳು, ಭೂಸುರರು, ಸಭಿಕರು ಸಂತೋಷದಿಂದ ನರೆದಲೆಗನನ್ನು ಎಲ್ಲ ನವಧಾನ್ಯಗಳಲ್ಲಿ ಬಲ್ಲಿದನು, ಈತನು ಹುಸಿಯಲ್ಲ ಎಂದು ಕೊಂಡಾಡಲು ರಾಮನೃಪಾಲನು ನರೆದಲೆಗನನ್ನು ನೆರೆಮೆಚ್ಚಿ ತನ್ನ "ರಾಘವ" ಎಂಬ ನಾಮವನ್ನು ಕರುಣಿಸಿದನು. ನರೆದಲೆಗ, ಆನಂದಾತಿಶಯದಿಂದ ಆನಂದ ಬಾಷ್ಪ ಸುರಿಸಿದನು. ವ್ರೀಹಿಯು ಅಪಮಾನದಿಂದ ಕಣ್ಣೀರು ಹಾಕಿದನು.

ಆಗ ಶ್ರೀರಾಮನ ವ್ರೀಹಿಯ ತಲೆ ನೇವರಿಸಿ ನೀನು ದೀನ ದರಿದ್ರರಿಗೆ ನಿರ್ದಯನೆದೆನಲ್ಲದೆ, ಹೀನಗಳಿದಿಲ್ಲ. ನೀನು ಸುರಧೇನುವಿಗೆ ಸಮ. ಚಿಂತಿಸಬೇಡ. ನೀನು ದೇವರಿಗೆ ಪರಮಾನ್ನ ನರೆದಲೆಗನು ಮನುಜಾವಳಿಗೆ ಪಕ್ವಾನ್ನ ನೀವಿಬ್ಬರೂ ಧರೆಯೊಳಗೆ ಹಿತವಾಗಿ ಬಾಳಿರಿ ಎಂದು ಆಶೀರ್ವದಿಸಲು, ನರೆದಲೆಗನು ವ್ರೀಹಿಯನ್ನು ತಬ್ಬಿ ಅವನ ಕಣ್ಣೀರು ಒರಸಿದನು. ಸಮಾಧಾನ ಪಡಿಸಿದನು.

ಆಗ ಹನುಮಂತನು ಲಗುಬಗೆಯಿಂದ ಮುಂದೆ ಬಂದು "ಅವನಿಗೆ ರಾಘವ ಎಂದು ಹೆಸರು ಕೊಟ್ಟಿರಿ, ನನಗಾರುಗತಿ?" ಎನ್ನಲು, ರಾಮನಿದ್ದೆಡೆ ನಿನ್ನಭಿಧಾನವಾಗಲಿ ಎಂದ ಶ್ರೀರಾಮ.

ರಾಘವ ಎಂಬ ಹೆಸರಿನ ಅಪಭ್ರಂಶವೇ ರಾಗಿ. ಅಂದಿನಿಂದ ನರೆದಲೆಗನು "ರಾಗಿ" ಎಂದು ಅಭಿದಾನ ಪಡೆದನು.

ತ್ರಿಮೂರ್ತಿಗಳು ಕರಕಮಂಡಲು, ತ್ರಿಶೂಲ, ಚಕ್ರಗಳನ್ನು ರಾಗಿಗೆ ಬಹುಮಾನವಿತ್ತರು. ಇಂದ್ರಾದಿದೇವತೆಗಳು ಬಲ್ಲರಿ, ಕನಕಮಣಿ ನಿರ್ಮಿತ ಕರಗವನ್ನಿತ್ತು ರಾಗಿಯನ್ನು ಸನ್ಮಾನಿಸಿದರು.

ದೇವಿ ಶರ್ವಾಣಿಯು ತನ್ನ ಬಳಗದ ಸ್ತ್ರೀಯರನ್ನು ಕರೆದು ನೀವು ಈ ಧರಣಿಯಲಿ, ಸತಿ ರೂಪತಾಳಿ ಅಗಣಿತ ಮನೆಗಳಲ್ಲಿ ಹುರುಳುಗೆಡದೆ ರಾಗಿಯ ಪಕ್ವಾನ್ನಗಳನ್ನು ಸರ್ವರಿಗೂ ನೀಡುವಂತಾಲಿ ಎಂದು ರಾಗಿಯನ್ನು ಆಶೀರ್ವದಿಸಿದಳು.

ದೇವತೆಗಳೂ, ದಾನವರೂ, ರಾಮಧಾನ್ಯದ ವಿವಾದ ತೀರಿತೆಂದು ಸಂತೋಷದಿಂದ ಹಿಂತೆರಳಿದರು.

ಓ ಧರ್ಮಜ ಇಂತಹ ರಾಮ ಕಥೆ ಕೇಳಿದ ನಿನಗೆ ಇಷ್ಟ ಭೋಗಗಳನ್ನು ಅಷ್ಟಸೌಭಾಗ್ಯಗಳನ್ನೂ ಹರಿ ಕರುಣಿಸುವಂತಾಗಲಿ ಎಂದು ಆಶೀರ್ವದಿಸಿ ಶಾಂಡಿಲ್ಯರು ತಮ್ಮ ಆಶ್ರಮಕ್ಕೆ ತೆರಳಿದರು.

ರಾಮಧಾನ್ಯ ಚರಿತ್ರೆ ಈ ಕಥನ ಕಾವ್ಯ ತನ್ನ ಓಜಸ್ಸು ಮತ್ತು ಮಾಧುರ್ಯ ಗುಣದಿಂದ ಬಹಳ ಅಪ್ಯಾಯಮಾನವಾಗಿದೆ. ರಾಮಾಯಣವನ್ನು ಸಂಕ್ಷಿಪ್ತವಾಗಿ ಹೇಳುವಾಗಲೂ ಕಿರಿದರಲ್ಲಿ ಪಿರಿದಂ ಪೇಳುವಂತೆ ಶ್ರೀರಾಮನ ಸೌಜನ್ಯ, ಸಾತ್ವಿಕ ಭಾವ, ಶೌರ್ಯ, ಗುಣಗ್ರಾಹಕತೆ, ತ್ರಿಮೂರ್ತಿಗಳ ಬಗೆಗೆ ಭಕ್ತಿ ಮುನಿಗಳ ಬಗೆಗೆ ಗೌರವ, ಜನಸಾಮಾನ್ಯರ ಬಗೆಗೆ ಪ್ರೀತಿ, ವಾತ್ಸಲ್ಯ, ಅಭೇದ ಈ ಗುಣಗಳನ್ನು ಎತ್ತಿ ಹಿಡಿಯುವುದರಲ್ಲಿ ಕನಕದಾಸರು ಯಶಸ್ವಿಯಾಗಿದ್ದಾರೆ. ವ್ರೀಹಿ ಮತ್ತು ನರೆದಲೆಗನಿಗೆ ನ್ಯಾಯಕೊಡುವಾಗಲೂ ಶ್ರೀರಾಮನ ಪ್ರಯೋಗಶೀಲತೆ ಮತ್ತು ಜನಪರವಾದ ಧೋರಣೆ ಮೆಚ್ಚುವಂತಹದು.

ರಾಮಧ್ಯಾನ ಚರಿತ್ರೆ ಇದು ವರ್ಣಕ ಕಾವ್ಯ. ವನಪ್ರದೇಶ, ಪುರ ಮತ್ತು ಒಡ್ಡೋಲಗದ ವರ್ಣನೆಯಿಂದ ಓದುಗರ ಮನಸ್ಸು ಪುಲಕಿತಗೊಳ್ಳುತ್ತದೆ. ಕಾವ್ಯಶೈಲಿಯಲ್ಲಿ ಲವಲವಿಕೆ ಇದೆ. ಉಪಮೆ, ಉತ್ಪ್ರೇಕ್ಷೆಗಳಿಂದ ಕಾವ್ಯ ತುಂಬಿ ತುಳುಕುತ್ತಿದೆ. ತರ್ಕಬದ್ಧತೆ ಮತ್ತು ಹೃದಯವಂತಿಕೆ ಕಾವ್ಯದ ಹಿತ ವೈಶಿಷ್ಟ್ಯ. ಹೀಗೆ ಕನಕದಾಸರು 'ರಾಘವ' ಎಂಬ ಅಭಿದಾನವನ್ನು ಪಡೆದ ಸಾರಹೃದಯ ರಾಗಿಯ ಜನಪರತೆಯನ್ನು ವ್ರೀಹಿಯ ಮಹತ್ವವನ್ನು ಹಿತಮಿತವಾಗಿ ಸಾರುವುದರಲ್ಲಿ ಯಶಸ್ವಿಯಾಗುತ್ತಾರೆ. 'ರಾಮಧಾನ್ಯ ಚರಿತ್ರೆ' ಒಂದು ಸಾರವುಳ್ಳ ಕಾವ್ಯವೆನಿಸುವುದರಲ್ಲಿ ಸಂದೇಹವಿಲ್ಲ.

•

### ರಹಸ್ಯ

ಇಡೀ ವರ್ಷ ಕಾಲಹರಣ ಮಾಡಿ,
ಕ್ರಿಕೆಟ್ - ಕಬ್ಬಡ್ಡಿ ಆಡಿ
ಕೆಲ ವಿದ್ಯಾರ್ಥಿಗಳು
ಪಾಸಾಗುತ್ತಾರೆ ಖಂಡಿತ
**"Inmy Pocket"**
ಗೆಳೆಯನ ಕೃಪೆಯಿಂದ !

- ಶೋಭಾ ಪ್ರಮೋದ್

# ಶತಮಾನದ ಮಹಾಮಾನವ - ಕಾರಂತ

ಡಾ. ಜಿ. ಎನ್. ಉಪಾಧ್ಯ

ಕಾಲಪುರುಷ
(ಕಾರಂತ ಶತಮಾನ ಲೇಖನ ಸಂಕಲನ)
(ಸಂ) ಪ್ರೊ. ಎಂ. ರಾಮಚಂದ್ರ,
ಪ್ರೊ. ಎನ್. ತಿರುಮಲೇಶ್ವರ ಭಟ್
ಡಾ. ಪಾದೇಕಲ್ಲು ವಿಷ್ಣುಭಟ್ಟ
ಕಾರಂತ ಶತಮಾನೋತ್ಸವ ಸಮಿತಿ
ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ
ಉಡುಪಿ ಮೊದಲ ಮುದ್ರಣ 2005
ಪುಟ XIV+179 ಬೆಲೆ ರೂ. 100/-

ಉಡುಪಿಯಲ್ಲಿರುವ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರವು ಪ್ರಕಟಣೆಯ ದಾರಿಯಲ್ಲಿ ಸಾಕಷ್ಟು ಹೆಸರು ಮಾಡಿದೆ. ಬಹುಮೂಲ್ಯ ಕನ್ನಡ ಕೃತಿಗಳನ್ನು ಹೊರತಂದು ತಿಳುವಳಿಕೆಯ ಪರಿಪ್ರೇಕ್ಷ್ಯವನ್ನು ಕಟ್ಟಿಕೊಡುವಲ್ಲಿ ಅದು ನಿರತವಾಗಿದೆ. 2002ನೇ ಇಸ್ವಿಯಲ್ಲಿ ಕಾರಂತ ಶತಮಾನೋತ್ಸವದ ಅಂಗವಾಗಿ ಮೂರು ದಿನಗಳ ಕಾಲ ಅದು ಹಮ್ಮಿಕೊಂಡ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧಗಳನ್ನು ಕಲೆಹಾಕಿ ಈಗ ಕೃತಿ ರೂಪದಲ್ಲಿ 'ಕಾಲಪುರುಷ' ಎಂಬುದಾಗಿ ನಾಮಕರಣಮಾಡಿ ಈಗ ಹೊರತಂದಿದೆ. ''ಕಾರಂತರ ಗಂಭೀರ ಸುಂದರ ಪಾರ್ಥಿವ ಆಕೃತಿ ಇಂದು ನಮ್ಮ ಕಣ್ಣ ಮುಂದೆ ಇಲ್ಲದಿದ್ದರೂ ಓದುಗರ ಕೈಗಳಲ್ಲಿರುವ ಈ ಕೃತಿ ಅವರ ಭಾವಮೂರ್ತಿಯನ್ನು ಢಾಳವಾಗಿ ಕಣ್ಣಿಗೆ ಕಟ್ಟಿಸಬಲ್ಲದು, ನೆನಪಲ್ಲಿ ಕಡೆದು ನಿಲ್ಲಿಸಬಲ್ಲದು' ಎಂದು ಪ್ರಸ್ತಾವನೆಯಲ್ಲಿ ಹೇರಂಜೆ ಕೃಷ್ಣ ಭಟ್ಟ ಅವರು ಹೇಳಿರುವ ಮಾತು ಅತ್ಯುಕ್ತಿಯದಲ್ಲ.

ಪ್ರಸ್ತುತ ಕಾಲ ಪುರುಷ ಕೃತಿಯಲ್ಲಿ ಇಪ್ಪತ್ತೊಂಬತ್ತು ಲೇಖನಗಳಿವೆ. ಶಿವರಾಮ ಕಾರಂತರನ್ನು ಹತ್ತಿರದಿಂದ ಬಲ್ಲವರು ಕಾರಂತರ ದೈತ್ಯ ಪ್ರತಿಭೆಯ ದರ್ಶನ ಮಾಡಿಕೊಡುವ ಪ್ರಯತ್ನ ಮಾಡಿದ್ದಾರೆ. ವ್ಯಕ್ತಿಯಾಗಿ ಕಾರಂತರು ಅದ್ವಿತೀಯರು. ಅವರದು ಸಾಗರ ಸದೃಶ ವ್ಯಕ್ತಿತ್ವ. ಸಾಹಿತ್ಯ , ಸಂಗೀತ, ಚಿತ್ರಕಲೆ, ನಾಟಕ, ನೃತ್ಯ, ಲಲಿತಕಲೆ ಮೊದಲಾದವು ಅವರ ಆಸಕ್ತಿಯ ಕ್ಷೇತ್ರಗಳಾದರೂ ಮೂಲತಃ ಅವರು ಲೇಖಕರು. ಸಾಹಿತ್ಯವೇ ಅವರ ಕಾರ್ಯಕ್ಷೇತ್ರ. ಆದರೆ ಕಾರಂತರು ಬರೇ ಸಾಹಿತಿಯಾಗಿ ಉಳಿದವರಲ್ಲ. ಸಿನಿಮಾ, ಶಬ್ದಕೋಶ, ಪರಿಸರ, ವಿಜ್ಞಾನ ಪ್ರಪಂಚ ಹೀಗೆ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ತಮ್ಮ ಕಾರ್ಯ ಶಕ್ತಿಯನ್ನು ಅನಾವರಣಗೊಳಿಸಿ ನಮ್ಮ ಭಾವಕೋಶದಲ್ಲಿ ಅವರು ಸೇರಿ ಹೋಗಿಬಿಟ್ಟಿದ್ದಾರೆ. ಕಾರಂತರ ಬರಹಗಳೆಲ್ಲ ಒಬ್ಬ ಮಹಾಮಾನವತಾವಾದಿಯ ಬಿಸಿಯುಸಿರು. ಅವರ ಜೀವನದಲ್ಲಿ ನಾನಾ ಆಸಕ್ತಿಗಳು ತುಂಬಿದ್ದವು. ಅವರಿಗೆ ಹೊರತಾದುದು ಯಾವುದು? ಎಂದು ಕೇಳುವಷ್ಟರ ಮಟ್ಟಿಗೆ ಅದು ಬೆಳೆದು ನಿಂತಿದೆ. ಹೀಗಾಗಿ ಕಾರಂತರದು ಬೆಟ್ಟದಂಥ ವ್ಯಕ್ತಿತ್ವ. ಅವರೊಬ್ಬ ಕಾಲಪುರುಷ!

''ಯಾವುದಾದರೊಂದು ನಿರ್ದಿಷ್ಟ ವರ್ಷದಲ್ಲಿ ಯಾರಾದರೂ ಒಬ್ಬ ಜೀವನದ ಹತ್ತೋ ಹಲವೋ ರಂಗಗಳಲ್ಲಿ ವಿಶಿಷ್ಟವಾದದ್ದು ಏನನ್ನಾದರೂ ಸಾಧಿಸಿದರೆ ಆತನನ್ನು ವರ್ಷದ ವ್ಯಕ್ತಿ ಎಂದು ಗುರುತಿಸುವುದೂ ಸ್ಮರಿಸುವುದೂ ಒಂದು ನವಸಂಪ್ರದಾಯ. ಕಳೆದ ಎಂದರೆ, ಇಪ್ಪತ್ತನೆಯ ಶತಮಾನದಲ್ಲಿ ಕನ್ನಡ ಜನತೆಯ ಮನೋರಂಗದಲ್ಲಿ ತಮ್ಮ ಬಹುವಿಧ ಸಾಧನೆಯಿಂದಲೂ ಬಹುಮುಖ ವ್ಯಕ್ತಿತ್ವದಿಂದಲೂ ಗಾಢವಾದ ಪ್ರಭಾವಮುದ್ರೆಯನ್ನು ಮೂಡಿಸಿದವರು ಯಾರು ಎಂದು ಕೇಳಿದರೆ ತಟ್ಟನೆ ಬರುವ ಉತ್ತರ ಶಿವರಾಮ ಕಾರಂತ ! ಎಂದರೆ ಕಾರಂತರು ವರ್ಷದ ವ್ಯಕ್ತಿಯಲ್ಲ. ಒಂದು ಶತಮಾನದ ಮಹಾಮಾನವ, ಒಂದು ಶತಮಾನವಷ್ಟೇ ಏಕೆ ಅವರು ಸರ್ವಕಾಲಿಕರಾದ ಕಾಲ ಪುರುಷ ಎಂದು ಈ ಕೃತಿಯ ಆರಂಭದಲ್ಲಿ ಸಂಪಾದಕ ವಿಮರ್ಶಕ ಪ್ರೊ. ಎಂ. ರಾಮಚಂದ್ರ ಅವರು ಮಾಡಿದ ಕೊಂಡಾಟದ ಮಾತುಗಳಲ್ಲಿ ತಥ್ಯವಿದೆ.

ಕಾರಂತರನ್ನು ಬಹು ಹಿಂದೆಯೇ ಕವಿ ವೀ. ಸೀತಾರಾಮಯ್ಯ ಅವರು 'ಕಾಲನಟ' ಎಂದು ಸಂಬೋಧಿಸಿ ಪದ್ಯವೊಂದನ್ನು ಬರೆದಿದ್ದರು. ಆ ಪದ್ಯವೂ ಈ ಕೃತಿಯ ಆರಂಭದಲ್ಲೇ ಬಂದಿರುವುದು ಔಚಿತ್ಯಪೂರ್ಣವಾಗಿದೆ. ಡಾ. ಗಿರಿಧರ ರಾವ್ ವೃತ್ತಿಯಲ್ಲಿ ವೈದ್ಯರು. ಅವರು ಕಾರಂತರ ಕುರಿತು ಹೇಳುವ ಮಾತುಗಳಿವು 'ಬಾಳುವೆಯಲ್ಲಿ ಬೆಳಕನ್ನು ಕಾಣಲು ಪ್ರಯತ್ನಿಸಿದ ತಮ್ಮ ಯತ್ನದಲ್ಲಿ ಕಾರಂತರು ಸಫಲರಾಗಿದ್ದಾರೆ. ಬೆಳಕು ಏನೆಂಬುದು ಇನ್ನೂ ಹುಡುಕಾಟದಲ್ಲಿಯೇ ಇದೆ. ಸತ್ಯದಿಂದ ಅಸತ್ಯಕ್ಕೆ ಹೋಗದೆ, ಮೃತ್ಯುವಿನಿಂದ ಅಮೃತತ್ವದೆಡೆಗೂ ಹೋಗದೆ, ಹಿಮ್ಮುಖವಾಗಿ ನಡೆದು ಸದಾ ಸತ್ಯಾನ್ವೇಷಣೆ ಮಾಡುತ್ತಾ ಪರರಿಗೆ ಹಿಂಸೆ ಕೊಡದೆ ಪರರನ್ನು ಮೆಚ್ಚಿಸಲಿಕ್ಕಾಗಿ ಯಾವುದೇ ಕೆಲಸ ಮಾಡದೇ ತಮ್ಮ ಆಯುಷ್ಯದ ಕೊನೆಯ ವರೆಗೂ ಚೆನ್ನಾಗಿ ಬಾಳಿದವರು ಕಾರಂತರು'.

ಎ.ಪಿ. ಮಾಲತಿ ಅವರ ಲೇಖನ ಬಹು ಹೃದ್ಯವಾಗಿದೆ. ಅವರು ದಾಖಲಿಸಿದ ಒಂದು ಸಂದರ್ಭವಿಂತಿದೆ. 'ಒಮ್ಮೆ ನನ್ನ ಯಜಮಾನರಿಗೆ ಕಾರಂತರ ಹತ್ತಿರ ಒಂದು ಪ್ರಶ್ನೆ ಕೇಳಬೇಕು ಎಂದು ತೋರಿ ಧರ್ಮ ಮತ್ತು ದೇವರ ಬಗ್ಗೆ ನೀವೇನು ಹೇಳುತ್ತೀರಿ? ಎಂದು ಕೇಳಿದರು. ಕಾರಂತರಿಗೆ ಇದ್ದಕ್ಕಿದ್ದ ಹಾಗೆ ಸಿಟ್ಟು ಬಂದು ಅಲ್ಲಯ್ಯಾ ನಿನಗ್ಯಾಕೆ ಈ ಪ್ರಾಯದಲ್ಲಿ ಧರ್ಮ ಮತ್ತು ದೇವರ ವಿಚಾರ. ನಿನ್ನ ಪಾಡಿಗೆ ನೀನು ಯಾರಿಗೂ ತೊಂದರೆ ಕೊಡದೆ ಚೆನ್ನಾಗಿ ಬದುಕುತ್ತಿದ್ದೀಯಲ್ಲ, ಅದು ನಿನ್ನ ಧರ್ಮ ಎಂದರು. ಇವರು ಸುಮ್ಮನೆ ಕುಳಿತರು. ಆಗ ಮತ್ತೆ ಅವರೇ ನಿನಗೆ ಇನ್ನೂ ವಿಶ್ಲೇಷಣೆ ಬೇಕಾದರೆ ನೀನು ಯಾರಿಗೂ ತೊಂದರೆ ಕೊಡದೆ ನಿನ್ನ ಪಾಡಿಗೆ ನೀನು ಜೀವನ ಮಾಡುವುದೇ ಧರ್ಮ. ಇನ್ನೊಬ್ಬರಿಗೆ ನೀನು ಉಪಕಾರಿಯಾಗು ಎಂದು ಹೇಳುವುದಿಲ್ಲ. ಆದರೆ ಉಪದ್ರವ ಮಾತ್ರ ಯಾರಿಗೂ ಮಾಡಬೇಡ. ಪರೋಪಕಾರಿ ಎಂಬ ಸೋಗಿನಿಂದ ಬದುಕಬೇಡ. ಇದು ಜೀವನದ ತಿರುಳು' ಕಾರಂತರು ನುಡಿದಂತೆ ನಡೆದರು.

ಪುತ್ತೂರಿನ ಮಾಧವ ನಾರಾಯಣ ಅವರು ತಮ್ಮ ಲೇಖನದಲ್ಲಿ ಕಾರಂತರ ಸಮಯಪ್ರಜ್ಞೆಯನ್ನು ಚೆನ್ನಾಗಿ ಸೆರೆ ಹಿಡಿದಿದ್ದಾರೆ. ಆ ಪ್ರಸಂಗವಿಂತಿದೆ. ಹಿರಿಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿ ಕೊಂಡವರು ಮಾತ್ರ ದೊಡ್ಡವರು ಎನಿಸಿಕೊಳ್ಳುತ್ತಾರೆ. ಪುತ್ತೂರಿನ ಒಂದು ಸಂಸ್ಥೆಯವರು ಕಾರಂತರನ್ನು ಒಂದು ಭಾಷಣಕ್ಕೆ ಕರೆದರು. ಅವರು 10 ನಿಮಿಷ ಬೇಗ ಬಂದರು. ನಾನು, ನನ್ನ ಸಹೋದರ, ಮೂರು ನಾಲ್ಕು ಜನ ಅವರ ಹತ್ತಿರ ಮಾತನಾಡುತ್ತಿದ್ದೆವು. ಅವರು ಒಳಗಿನ ಬದಿಗೆ ಮುಖಮಾಡಿ ವಾಚು ಕಟ್ಟುವುದು, ಆಗಾಗ ವಾಚು ನೋಡುತ್ತಾ ಇದ್ದರು. ಆರಾಯಿತು. ನಮ್ಮ ಹತ್ತಿರ ಮಾತನಾಡುತ್ತಿದ್ದಾರೆ. 6.5 ಆಯಿತು. 6.10 ಆಯಿತು. ಕಾರಂತರು ಸಂಯೋಜಕರನ್ನು ಕರೆದು ಏನು ಆರಂಭ ಆಗಲಿಲ್ಲ ಎಂದು ಕೇಳಿದರು. ಆಗ ಅವರು ಹೇಳಿದರು. 'ಸ್ವಲ್ಪ ಜನ ಜಾಸ್ತಿ ಬರಲಿ ಎಂದು ಕಾಯುತ್ತಿದ್ದೇವೆ' ಅಂತ. ಆಗ ಅವರು ಹೇಳಿದ ಮಾತು 'ಇಲ್ಲಿ ಸಂತೆ ನಡೆಯುವುದಿಲ್ಲ. ಅಲ್ಲಿಗೆ ಹೋಗುವ, ಅಲ್ಲಿ ಬಹಳಷ್ಟು ಜನ ಇರುತ್ತಾರೆ. ಈ ಕಾರ್ಯಕ್ರಮವನ್ನು ನಾವು ಅಲ್ಲಿಯೇ ಮಾಡುವ, ಆಗದೋ?' ಸಂಚಾಲಕರಿಗೆ ಹೆದರಿಕೆಯಾಗಿ ತಕ್ಷಣ ಕಾರ್ಯಕ್ರಮವನ್ನು ಆರಂಭ ಮಾಡಿದರು.

ಡಾ. ಮಹೇಶ್ವರಿ ಅವರ ತಾಯಿ ತೀರಿಕೊಂಡಾಗ ಕಾರಂತರು ಬರೆದ ಉತ್ತರ ಅದೆಷ್ಟು ವಾಸ್ತವವನ್ನು ಒಳಗೊಂಡು ಮಾರ್ಮಿಕವಾಗಿದೆ ನೋಡಿ. 'ಮಕ್ಕಳಾದವರಿಗೆ ಅವರವರ ಮಾತಪಿತೃಗಳ ವಿಯೋಗ ದುಃಖ ತಂದೇ ತಂದೀತು. ಮಕ್ಕಳ ಸಲುವಾಗಿಯೇ ಯಾರೂ ಎಲ್ಲೂ ಉಳಿದಿಲ್ಲ. ಜೀವನದ ಧರ್ಮ ಅದು. ಪ್ರತಿಯೊಂದು ಜೀವಿಗೂ ಅವರ ಹಿರಿಯರು ವಾರ್ಧಕ್ಯದ ಬಳಿಕ ಮರಳಿ ಬಾರದಲ್ಲಿ ಯಾತ್ರೆ ಮಾಡುತ್ತಾರೆ. ಬದುಕಿ ಓಡಾಡಿ ಕೊಂಡು ಇದ್ದು ತಮ್ಮ ಕೆಲಸ ತಾವು ಮಾಡಿಕೊಂಡಿರುವಷ್ಟು ಕಾಲ ಸಹನೀಯ. ಅನಂತರ ನಾವೆಲ್ಲರೂ ಇದನ್ನು ಕಲಿತೇ ಕಲಿಯಬೇಕು. ನಾವಿರುವುದು ನಮಗಾಗಿ. ಕಣದಿಂದ ಕಣಕ್ಕೆ ಹಿಂದಿನವರಿಂದ ನಾವು. ನಮ್ಮಿಂದ ಮುಂದಿನವರು. ಇದು ನಿಡುಗಾಲದ ಸರಣಿ. ಕಾರಂತರು ಸಾವನ್ನು ನಿಸರ್ಗ ಸಹಜ ಕ್ರಿಯೆಯಾಗಿ ಕಾಣುತ್ತ ನೊಂದ ಜೀವಕ್ಕೆ ಸಾಂತ್ವನ ಹೇಳುವ ಪರಿ ಅನನ್ಯ.

ತಿಂಗಳೆ ರವೀಂದ್ರ ಹೆಗ್ಗಡೆ ಅವರು ಕಾರಂತರಿಗೆ ತುಂಬ ಹತ್ತಿರವಾಗಿದ್ದರು. ಕಾರಂತರು ಅದೆಷ್ಟು ಸ್ನೇಹ ವತ್ಸಲರಾಗಿದ್ದರೆಂಬುದಕ್ಕೆ ವಿಕ್ರಮಾರ್ಜುನ ಹೆಗ್ಗಡೆ

ಅವರ ಲೇಖನ ಒಂದೇ ಸಾಕು. ಜ್ಞಾನ ಪೀಠ ಪ್ರಶಸ್ತಿಯ ಶಾಲನ್ನು ಕಾರಂತರು ತಮ್ಮ ಗೆಳೆಯನಿಗೆ ಹೊದಿಸಿ ಗೌರವಿಸಿದ ಪರಿಗೆ ಯಾರೂ ಬೆರಗಾಗಬೇಕು. ಕಾರಂತರು ಬರೇ ಸಿಟ್ಟಿನ ಕೊಳ್ಳಿ ಎಂಬ ತಪ್ಪು ಕಲ್ಪನೆಯಿದೆ. ಕಾರಂತರ ಹಾಸ್ಯ ಪ್ರಜ್ಞೆಗೆ ಈ ಕೃತಿಯಲ್ಲಿ ಸಾಕಷ್ಟು ಉಲ್ಲೇಖಗಳು ಸಿಗುತ್ತವೆ. ರಾಘವೇಂದ್ರ ಭಟ್ಟ ಬರೆದ ಒಂದು ಸಂದರ್ಭವಿಂತಿದೆ. ನಾನು ಕಾರಂತರ ಸಮ್ಮುಖದಲ್ಲಿ ಭಾಷಣ ಮಾಡುತ್ತಾ, ಯಕ್ಷಗಾನ ಕಲೆ ದ.ಕ. ಜಿಲ್ಲೆಯವರಿಗೆ ರಕ್ತಗತವಾಗಿ ಬಂದದ್ದು ಎಂದು ಹೇಳಿದೆ. ಕೂಡಲೇ ಕಾರಂತರು ಗುಡುಗಿದರು. ಸ್ವಾಮೀ ರಕ್ತಗತವಾಗಿ ಬರುವುದು ಒಂದೇ, ಕಾಯಿಲೆ, ಕಲೆ ಅಭ್ಯಾಸ ಮಾಡಿ ಬರಬೇಕು.

'ಎಳೆಯರ ಗೆಳೆಯ, ಹಳಬರಿಗೆ ಹಿರಿಯ' ಎಂಬ ಪ್ರೊ. ಬಿ.ಎ. ವಿವೇಕ ರೈ ಅವರ ಲೇಖನ ಬಹಳ ರೋಚಕವಾಗಿದೆ. ಕಾರಂತರ ಕುರಿತು ನಾವು ಕಲ್ಪಿಸಿಕೊಂಡ ತಪ್ಪುಗಳನ್ನು ತಿದ್ದಲು ನಮ್ಮ ದೃಷ್ಟಿ ತಿದ್ದಲು ಈ ಲೇಖನ ಸಹಕಾರಿಯಾಗಿದೆ. ಬಹುಶ ಕಾರಂತರ ಮುಂಗೋಪ ಎನ್ನುವುದು ಒಂದು ಹೊರಪದರ ಮಾತ್ರ. ಅದನ್ನು ಕಿತ್ತು ಹಾಕಿದರೆ ಒಳಗಡೆ ಮುಗ್ಧ ಮಗುವಿನ ನಗುವಿನ ಅಲೆಗಳು ಚಿಮ್ಮುತ್ತವೆ. ಮಗುವಿನ ಮುಗ್ಧತೆ ದಾರ್ಶನಿಕನ ದಾರ್ಶನಿಕತೆ ಮತ್ತು ಎಲ್ಲೂ ಮಾನವೀಯತೆಯನ್ನು ಬಿಟ್ಟುಕೊಡದ ವೈಚಾರಿಕತೆಯ ಕಾರಂತರು ಅವರ ಎಲ್ಲ ಸಾಧನೆಗಿಂತಲೂ ದೊಡ್ಡವರು ಎಂಬುದನ್ನು ಸೋದಾಹರಣವಾಗಿ ವಿವರಿಸಿದ್ದಾರೆ. 'ಅನುಬಂಧ'ದಲ್ಲಿ ಕೊಡಲಾದ ಡಾ. ರಾಜೇಂದ್ರ ಚೆನ್ನಿ, ಡಾ. ತಾಳ್ತಜೆ, ಶಂಭು ಹೆಗಡೆ ಅವರ ಲೇಖನಗಳೂ ಕಾರಂತತನವನ್ನು ಎತ್ತಿ ತೋರಿಸುತ್ತವೆ. ಕಾರಂತರ ಕುರಿತು ಸಾಕಷ್ಟು ಕೃತಿಗಳು ಬಂದಿವೆ. ಆದರೂ 'ಕಾಲಪುರುಷ' ಕೃತಿ ಕಾರಂತರ ಬದುಕಿನ ಹಿರಿಮೆಯನ್ನು ವಿಶಿಷ್ಟ ರೀತಿಯಲ್ಲಿ ಅನಾವರಣ ಮಾಡುವಲ್ಲಿ ಯಶಸ್ಸು ಕಂಡಿದೆ. ಕಾರಂತ ವ್ಯಕ್ತಿತ್ವದ ಚತುರ ಪ್ರತೆಯನ್ನು ಕಂಡರಿಸುವ ಪ್ರಾಂಜಲ ಪ್ರಯತ್ನವಿದು. •

## ನಗೆ ಮಲ್ಲಿಗೆ

(ಪುಟ 3ರಿಂದ)

ಅಭಿನಯಿಸಿದರು ಎನ್. ಸದಾನಂದ್ ಮತ್ತು ಆರ್. ಎಸ್. ಜಯಶಂಕರ್, ಯೋಗೇಶ್ ಅವರು ಸಿನೆಮಾ ಪ್ರೇಮಿಯ ಪಾತ್ರವನ್ನು ವಹಿಸಿದ್ದರು.

ನಾಟಕದಲ್ಲಿಯೂ ಹಾಸ್ಯದ ಸನ್ನಿವೇಶಗಳುಂಟಾಗುತ್ತವೆ. ಇವು ಭಾಷೆಯ ತಪ್ಪು ಬಳಕೆಯಿಂದ, ಪೇಚಿಗೆ ಸಿಕ್ಕಿಕೊಳ್ಳುವಂತಾ ಸನ್ನಿವೇಶ ಗಳಿಂದ, unexpected turn of events, ಈ ರೀತಿ ಅನೇಕ ಕಾರಣಗಳಿಂದ ಉಂಟಾಗಬಹುದು ಎಂದು ಹೇಳಿ, ಇವನ್ನು ತೋರಿಸುವ ಎರಡು ಪ್ರಸಂಗಗಳನ್ನು ನಮ್ಮ ಮುಂದಿಟ್ಟರು.

ಮೊದಲನೆಯದು, 50 ವರ್ಷಗಳ ಹಿಂದೆ ಕರ್ನಾಟಕದಲ್ಲಿ ಬಹಳ ಜನಪ್ರಿಯವಾದ 'ಧರ್ಮರತ್ನಾಕರ' ನಾಟಕದ ದೃಶ್ಯ. ಊರಿನಲ್ಲಿ ಪ್ರತಿಷ್ಠಿನಾದ ಶ್ರೀಮಂತ ವ್ಯಾಪಾರಿಯನ್ನು ಸಾರ್ವಜನಿಕ ಸಭೆಗೆ ಅಧ್ಯಕ್ಷನಾಗಿ ಕರೆದಿದ್ದಾರೆ. ಆತ ಅಲ್ಲಿ ಭಾಷಣ ಮಾಡಬೇಕು. ಆತನಿಗೆ ಇಂಗ್ಲಿಷ್ ಸರಿಯಾಗಿ ಬರುವುದಿಲ್ಲ, ಆದರೂ ಇಂಗ್ಲೀಷಿನಲ್ಲೇ ಮಾತಾಡಬೇಕೆಂಬ ಆಸೆ. ಈ ಮಧ್ಯ ಆತನಿಗೆ ಪಕ್ಕದಲ್ಲಿರುವವರ mislead ಮಾಡುವ ಕುಚೇಷ್ಟೆಗಳು. ಇದೆಲ್ಲಾ ಸೇರಿ, ಈತನ ಅಧ್ಯಕ್ಷ ಭಾಷಣದಲ್ಲಿ ಆಗುವ ಅಭಾಸ ಮತ್ತು ಅಪಾರ್ಥ ಹಾಸ್ಯಕ್ಕೆ ಕಾರಣವಾಗುತ್ತದೆ.

ಎರಡನೆಯ ಪ್ರಸಂಗದಲ್ಲಿ ಓರ್ವನು ತನ್ನ ಮಿತ್ರನನ್ನು ಭೇಟಿಮಾಡಲು ಆತನ ಮನೆಗೆ ಹೋಗುತ್ತಾನೆ, ಆದರೆ ಆ ಸಮಯದಲ್ಲಿ ಮಿತ್ರನು ಮನೆಯಲ್ಲಿಲ್ಲ. ಆತನ ಬರುವಿಗಾಗಿ ಕಾಯುತ್ತಾ ಕುಳಿತಿರುವಾಗ ಮಿತ್ರನ ಮನೆಯ ಕೆಲಸದವನೊಂದಿಗೆ ಮಾತನಾಡಿ ಪೇಚಿಗೆ ಸಿಕ್ಕಿಕೊಳ್ಳುವ ಸನ್ನಿವೇಶ. ಕಾಫಿ ಕುಡಿಯುತ್ತೀರಾ ಎಂಬ ಪ್ರಶ್ನೆಗೆ ಹೂಂ ಎಂದ ಅವನಿಗೆ ಮುಂದೆ ಪ್ರಶ್ನೆಗಳ ಸುರಿಮಳೆಯನ್ನೇ ಎದುರಿಸಬೇಕಾಗುತ್ತದೆ. ಫಿಲ್ಟರ್ ಕಾಫೀನಾ, ನೆಸ್ಕಫೇನಾ?, ಸಕ್ಕರೆ ಹಾಕಲಾ, ಬೇಡವಾ? ಮಿಕ್ಸ್ ಮಾಡಿತರಲಾ, ಇಲ್ಲ ನೀವೆ ಮಿಕ್ಸ್ ಮಾಡಿಕೋತೀರ? ಹಾಲು ಸೇರಿಸ್ಟಹುದಾ, ಬೇಡವಾ? ತುಂಬಾ ಬಿಸಿ ಬೇಕಾ, ಇಲ್ಲ ಮೀಡಿಯಂ ಆಗಿ ಇರಲಾ? ಕಪ್ಪಿನಲ್ಲಿ ತರಲಾ, ಲೋಟದಲ್ಲಿ ತರಲಾ?'' ಇತ್ಯಾದಿ ಮುಗಿಯಲಾರದ ಪ್ರಶ್ನೆಗಳ ಸುರಿಮಳೆ.

ಸರಿ, ಕಾಫಿ ಅಂದರೆ ತಾನೆ ಈ ಗೋಳು ಅಂತ, ''ಏನೂ ಬೇಡ, ಬರಿ ನೀರು ಸಾಕು'' ಅಂತಾನೆ ಆತ. ಈತ ಸುಮ್ಮನೆ ನೀರು ತರತಾನೇ? ಮತ್ತೆ ಶುರು ಪ್ರಶ್ನೆಗಳ ಸುರಿಮಳೆ. ''ಬಿಸಿನೀರಾ, ತಣ್ಣೀರಾ ಸಾರ್ ? ಫ್ರಿಜಿನದಾ, ಸಾದಾನಾ? ಕುದಿಸಿದ್ದಾ, ಫಿಲ್ಟರ್‌ದಾ? ಬಿಸ್ಲೇರಿನಾ, ಆರ್ಡಿನರೀನಾ? ಗ್ಲಾಸಿನಲ್ಲಾ, ಸ್ಟೀಲ್ ಲೋಟದಲ್ಲಾ? ಇತ್ಯಾದಿ ಪಾಪ ಆ ಬಡಪಾಯಿ ಏನ್ಮಾಡ್ತಾನೆ? ''ನನ್ಗೇನೂ ಬೇಡಾ'' ಅಂತ ಅಲ್ಲಿಂದ ಪರಾರಿಯಾಗ್ತಾನೆ.

ಇಂದ್ರಜಾಲದಲ್ಲಿ ಹಾಸ್ಯವನ್ನು ತೋರಿಸಿದವರು ಮಂಜುನಾಥ ಹಿರೇಮಠ. ಖಾಲಿ ಡಬ್ಬಿಯಿಂದ ಪ್ರೇಕ್ಷಕರು ಕೇಳಿದ ತಿಂಡಿ ತಿನಸು, ಖಾಲಿ ಚೀಲದಲ್ಲಿ ಒಂದು ನೋಟನ್ನು ಹಾಕಿ ಅನೇಕ ನೋಟುಗಳನ್ನು ಹೊರತೆಗೆಯುವುದು. ಇತ್ಯಾದಿಯಾದ trickಗಳ ಮೂಲಕ ಅವರು ಪುಟ್ಟ ಮಕ್ಕಳಿಂದ ದೊಡ್ಡವರ ವರೆಗೆ ಎಲ್ಲರನ್ನು ರಂಜಿಸಿದರು.

ಮತ್ತೊಂದು ಪ್ರಸಂಗದಲ್ಲಿ ಹಾಡಿನಲ್ಲಿ ಭಾಷೆ ಬದಲಾದರೆ ಎಂತಾ ಹಾಸ್ಯಮಯವಾದ ಸನ್ನಿವೇಶ ಉಂಟಾಗಬಹುದು ಎಂಬೋದನ್ನ ತೋರಿಸುತ್ತಾರೆ. ಒಂದು ಬೃಹತ್ ಸಮಾರಂಭ. ಇನ್ನೇನು ಮುಗಿಯಬೇಕು ಅನ್ನೋ ಹೊತ್ತಿಗೆ ಅಲ್ಲಿಗೆ ಒಬ್ಬರು ಹೆಸರಾಂತ ಸಂಗೀತ ವಿದ್ವಾಂಸರು ತಮ್ಮ ಶಿಷ್ಯವರ್ಗದೊಂದಿಗೆ ಬರುತ್ತಾರೆ. ಸಮಾರಂಭದ ನಿರ್ವಾಹಕರು ಅತಿ ಆನಂದದಿಂದ ಅವರನ್ನು ಸ್ವಾಗತಿಸಿ ಮಂಗಳ ಗೀತೆಯನ್ನು ಹಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತಾರೆ. ಸಂಗೀತ ವಿದ್ವಾಂಸರು ಒಪ್ಪಿ ''ಭಾಗ್ಯಾದ ಲಕ್ಷ್ಮೀ ಬಾರಮ್ಮ'' ಗೀತೆಯನ್ನು ಪ್ರಾರಂಭಿಸುತ್ತಾರೆ. ಸೊಗಸಾಗಿ ಹಾಡುತ್ತಿರುವಾಗ ವಿದ್ವಾಂಸರಿಗೆ ಇದ್ದಕ್ಕಿದ್ದಂತೆ ಗಂಟಲು ಕೆಟ್ಟು ಧ್ವನಿಯೇ ಏಳುವುದಿಲ್ಲ. ಹಾಡುವುದು ನಿಲ್ಲುತ್ತದೆ. ಶಿಷ್ಯರುಗಳಿಂದ ಗುರುಗಳ ಆರೈಕೆ, ಉಪಚಾರ ನಡೆಯುತ್ತದೆ. ನಿರ್ವಾಹಕರು ಮಂಗಳವು ಅರ್ಧದಲ್ಲಿಯೇ ನಿಂತಿತಲ್ಲಾ, ಇದನ್ನು ಸಂಪೂರ್ಣಗೊಳಿಸಬೇಕು ಎಂದು ಅವರ ಶಿಷ್ಯರನ್ನು ಕೇಳಿಕೊಳ್ಳುತ್ತಾರೆ. ಆದರೆ ಶಿಷ್ಯರಲ್ಲಿ ಅನೇಕರಿಗೆ ಈ ಹಾಡು ಸರಿಯಾಗಿ ಗೊತ್ತಿಲ್ಲ. ಒಬ್ಬೊಬ್ಬರಾಗಿ ಪ್ರಯತ್ನಿಸಿ ವಿಫಲರಾದಾಗ ಕೊನೆಗೆ ಶಿಷ್ಯ ಕರೀಂ ನ ಸರದಿ ಬರುತ್ತದೆ. ಆತನಿಗೆ ಹಾಡಿನ ರಾಗ ಗೊತ್ತು, ಅದರ ಅರ್ಥ ಗೊತ್ತು, ಆದರೆ ಸಾಹಿತ್ಯ ಗೊತ್ತಿಲ್ಲ. ಆತ ಹಾಡಿ ಮಂಗಳವನ್ನು ಸಂಪೂರ್ಣಗೊಳಿಸುತ್ತಾನೆ. ಆದರೆ. ಹಾಡಿನಲ್ಲಿ ಮಧ್ಯ ಮಧ್ಯ ತನಗೆ ಗೊತ್ತಿಲ್ಲದ ಕನ್ನಡ ಪದಗಳಿಗೆ ಅದೇ ಅರ್ಥ ಕೊಡುವ ಉರ್ದು ಪದಗಳನ್ನು ಸೇರಿಸುತ್ತಾನೆ. ಇದರಿಂದ ಹಾಸ್ಯಮಯ ಸನ್ನಿವೇಶ ಉಂಟಾಗುತ್ತದೆ.

ಎರಡು ಘಂಟೆಗಳ ಅವಧಿಯ ಈ ಕಾರ್ಯಕ್ರಮದ ವೈಶಿಷ್ಟ್ಯವೆಂದರೆ, ಇವರು ಸಾದರ ಪಡಿಸಿದ ಹಾಸ್ಯದಲ್ಲಿ ಯಾವುದೇ ರೀತಿಯ ದ್ವಂದ್ವಾರ್ಥ ಅಥವಾ ಅಶ್ಲೀಲತೆ, ಅವಹೇಳನ, ಅಣಕು ಇತ್ಯಾದಿ ಇರಲಿಲ್ಲ. ಸ್ವಸ್ಥವಾದ, ಸುಂದರವಾದ, ನಮ್ಮ ದೈನಂದಿನ ಜೀವನದಲ್ಲಿ ನಡೆಯುವಂತ ಘಟನೆಗಳಲ್ಲಿ ಉದ್ಭವಿಸಬಹುದಾದ ಹಾಸ್ಯಮಯ ಸನ್ನಿವೇಶಗಳನ್ನು ಇವರು ಪ್ರಸ್ತುತ ಪಡಿಸಿದರು. ಕೊನೆಯ ಪ್ರಸಂಗಕ್ಕೆ ಮುಂಚೆ, ಮೈಸೂರು ಅಸೋಸಿಯೇಷನ್ನಿನ ಪರವಾಗಿ ಕಾರ್ಯದರ್ಶಿ ಪ್ರಸಾದ್ ಅವರು ಗಾನ ವಿನೋದಿನಿ ತಂಡದ ಪರವಾಗಿ ಶ್ರೀ ಸುಬ್ಬರಾಮು ಅವರಿಗೆ ಪುಷ್ಪಗುಚ್ಛವನ್ನೂ ಸ್ಮರಣಿಕೆಯನ್ನೂ ಅರ್ಪಿಸಿ, ಅವರನ್ನು ಅವರ ತಂಡದ ಕಲಾವಿದರನ್ನು ಪರಿಚಯಿಸಲು ಕೋರಿದರು. ಪರಿಚಯಿಸಿದ ಕಲಾವಿದರೆಲ್ಲರಿಗೂ ಪುಷ್ಪ ಗುಚ್ಛವಿತ್ತು ಗೌರವಿಸಲಾಯಿತು.

ಎಲ್ಲರೂ ನಕ್ಕು ನಕ್ಕು ಸುಸ್ತಾದರು. ಕಾರ್ಯಕ್ರಮದ ನಂತರ ಶ್ರೀ ರಮಾ ವಸಂತ್ ಅವರು ಇಂದು ಈ ಹಾಸ್ಯ ಚಕ್ರವರ್ತಿಗಳು ಎಲ್ಲರನ್ನೂ ನಗಿಸಿದ ಧರ್ಮ. ಅತಿಶಯಕ್ಕೂ ಮೀರಿದ ಧರ್ಮ, ಮನುಷ್ಯ ದುಃಖದ ಸಮಯದಲ್ಲಿ ಇಂತಹ ಹಾಸ್ಯೋಕ್ತಿಗಳು ಸ್ವಲ್ಪ ಕಾಲವಾದರೂ ದುಃಖವನ್ನು ಮರೆಸುತ್ತದೆ ಎಂದು ಹೇಳಿ ಎಲ್ಲರಿಗೂ ಧನ್ಯವಾದಗಳನ್ನು ಹೇಳಿದರು. •

# सुभाषितानि SUBHAASHITAANI
## Words of Wisdom

पुस्तकस्था तु या विद्या परहस्तगतं धनम् ।
कार्यकाले समुत्पन्ने न सा विद्या न तद् धनम् ॥

Pustakasthaa tu yaa vidyaa
Parahasagatam Dhanam
Kaaryakaale Samutpanne
Na Saa Vidya na tad dhanam

One's knowledge kept away in books and one's wealth kept in other's hand are of no use at the time of need. That knowledge which is not readily available to you at the hour of need and the wealth in a similar state are neither knowledge nor wealth in the real sense.

अस्तंगतो भानुरुदेति भूयः
क्षीणोऽपि चन्द्रो लभते विकासम् ।
छिन्नोऽपि वृक्षः श्रियमुद्विभर्ति
तन्मा स्म भूः कार्यहतो हताशः ॥

Astangato bhaanurudeti bhooyah
Ksheenopi chandro labhate vikaasam
Chinnopi vrukshah sriyamudvibharti
Tanmaa sma bhuh kaaryamudvibharti

This a beautiful verse we can keep repeating to ourselves. When anything goes wrong in life, very few of us have the ability to face it or get over it. We must know that nothing good nor bad lasts for ever. While one does not mind good things prolonging their stay with us, one does not want anything going the wrong way.

So the poet says- the sun that sets definetly rises again, the waning moon certainly starts waxing, the tree that is cut grows once again, so do not lose heart, when you meet with disappointment. One will certainly find hope in life.

उद्यमेन हि सिद्ध्यन्ति कार्याणि न मनोरथैः ।
नहि सुप्तस्य सिंहस्य प्रविशन्ति मुखे मृगाः ॥

Udyamena hi Siddhyanti Kaaryaani na manorathaih
Na hi suptasya simhasya pravisanti mukhe mrugaah

This verse highlights the importance of enterprise. Many people have big thoughts ambitions and dreams. Unless they are put to action, they do not bear fruit. Even the powerful person cannot succeed without making an effort. The poet supports his point by stating that even animals (Lion's Preys) do not go into the mouth of sleeping lion. So let us get into action right away to realize our dreams.

Same is the essence of the saying.
उद्योगिनं पुरुषसिंहमुपैति लक्ष्मीः
Udyoginam purushasimhamuyaiti lakshmech
i.e Goddess of prosperity only goes to the hardworking people.

उत्तमं प्रणिपातेन शूरं भेदेन योजयेत् ।
नीचमल्प प्रदानेन समशक्तिं पराक्रमैः ॥

Uttamam pranipaatena sooram bhedena yojayet
Neechamalpa pradaanena samasaktim paraakramaih

Here is one from panchatantra, the book which teaches you to be worldly wise. In our day to day life we have to deal with a variety of people. We look upon as supervisors to us, some brave and powerful, some as inferiors and some as equal to us.

The author gives us tips to handle these different people in different ways. Bow down or submit yourself to the superior, tackle the powerful by creating a split (with their equals), the inferior can be tackled by giving away a little and the ones equal to us should be tackled by valour (our own strength)

दुर्जनेन समं सख्यं प्रीतिं चाऽपिन कारयेत् ।
उष्णो दहति अंगारः शीतः कृष्णायते करम् ॥

Durjanena samam sakhyam
Preetim chaapi na kaarayet
Ushno dadti angaarah
Seetah krshnaayate karam

This verse clearly advice us to keep off the wicked people, they are bad while they are fierce as also when they are cool. The example is that of fire. We keep away from it when hot, it burns you and when cool, it blackens your palm that touches it. Either way it is untouchable and hence avoidable.

जिह्वे प्रमाणं जानीहि भोजने वचने तथा ।
अति भोक्तमतिचोक्तं प्रणिनां मरणप्रदम् ॥

Jihve pramaanam jaanihi bhojane vachane tathaa
Atibho ktamati choktam praaninaam maranapradam.

This one states the importance of retraining our tongue. It is addressed to the tongue, telling it to know its limit both in matters of food as well as speech. Eating beyond the limit and speaking beyond its limit can both lead one to death, meaning destruction.

न हि मे पर्वता भाराः नमे भाराश्च सागराः ।
कृतघ्नाश्च महाभारा भारा विश्वास घातकाः ॥

Nahi mae parvataabharaah na mae bhaarascha saagarah
Krutaghnaascha Mahaabhaaraa bhaaraa viswaasa ghaatakaah

The earth says" the mountains are not burden to me, nor are the oceans. The real burden to me are the ungrateful ones and the ones who are untrustworthy.

*Compiled by **Mrs. Janaki S. Mani***
*Mumbai*

## ಸುತ್ತಮುತ್ತ

### ಶ್ರದ್ಧಾ ಭಕ್ತಿಯ ಗುರು ಪೌರ್ಣಮಿ ಆಚರಣೆ

ಧಾರವಾಡ ತಪೋವನದ ಮಹಾತಪಸ್ವಿ ಶ್ರೀ ಕುಮಾರ ಸ್ವಾಮಿಜಿ ಪ್ರತಿಷ್ಠಾನದ ಮುಂಬಯಿ ವಿಭಾಗದವರು ದಿನಾಂಕ 21-7-2005 ರಂದು ಮೈಸೂರು ಅಸೋಸಿಯೇಶನ್ ಸಭಾಗೃಹದಲ್ಲಿ ಶ್ರೀ ಗುರು ಪೂರ್ಣಿಮಾ ಉತ್ಸವವನ್ನು ಆಚರಿಸಿದರು.

ಈ ಉತ್ಸವವನ್ನು ಮಹಾರಾಷ್ಟ್ರ ಸರಕಾರದ ತೋಟಗಾರಿಕೆ ಸಚಿವ ಶ್ರೀ ವಿನಯ ಕೋರೆಯವರು ಉದ್ಘಾಟಿಸಿದರು. ರಾಜ್ಯ ಗೃಹ ಸಚಿವ ಶ್ರೀ ಸಿದ್ಧರಾಮ ಮ್ಹಾತ್ರೆಯವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು.

ಸೋಲಾಪೂರ ವಿಶ್ವ ವಿದ್ಯಾಲಯ ಉಪಕುಲಪತಿ ಡಾ. ಪರೇಶ್ ಎಸ್. ಸ್ವಾಮಿಯವರು ಮರಾಠಿಯಲ್ಲಿ ಉಪನ್ಯಾಸ ಮಾಡಿದರು. ಶ್ರೀಯುತರು ಸಂತರು ಭಾರತೀಯ ಸಂಸ್ಕೃತಿಗೆ ಕೊಟ್ಟ ಕೊಡುಗೆನ್ನು ಮತ್ತು ಗುರು ವಂದನ ಕಾರ್ಯಕ್ರಮದ ಮಹತ್ವವನ್ನು ಪಾಂಡಿತ್ಯಪೂರ್ಣವಾಗಿ ವಿವರಿಸಿದರು.

ಅಕ್ಕಲಕೋಟೆಯ ಸಿ.ಬಿ.ಕೆ. ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ. ಜಿ.ಎಸ್. ಧಾಬಲೆಯವರು ಕನ್ನಡದಲ್ಲಿ ಉಪನ್ಯಾಸ ಮಾಡಿ, ಶಿವಶರಣರು ಕನ್ನಡ ಸಾಹಿತ್ಯಕ್ಕೆ ಸಮಾಜಕ್ಕೆ ಕೊಟ್ಟ ಕೊಡುಗೆಯನ್ನು ಸ್ವಾರಸ್ಯಕರವಾಗಿ ಹೇಳಿದರು.

ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ, ಸಂಗೀತ ವಿದುಷಿ ಶ್ರೀಮತಿ ಉಮಾನಾಗಭೂಷಣ್ ಮತ್ತು ಡಾ. ಶ್ರೀಮತಿ ರಸಿಕ ಪುಸ್ಮೆಯವರಿಂದ ಮಹಾರಾಷ್ಟ್ರ ಮತ್ತು ಕರ್ನಾಟಕ ಸಂತರ ಗಾಯನ ನಡೆಯಿತು. ಈ ಕಾರ್ಯಕ್ರಮವು ಎಲ್ಲರ ಮೆಚ್ಚುಗೆಯನ್ನು ಪಡೆಯಿತು.

ಆರಂಭದಲ್ಲಿ ಉತ್ಸವದ ವ್ಯವಸ್ಥಾಪಕ ಶ್ರೀ ಸುಬ್ರಮಣಿಯವರು ಎಲ್ಲರನ್ನು ಸ್ವಾಗತಿಸಿದರು. ಎಸ್.ಎಂ. ಪಾಟೀಲರು ವಂದನಾರ್ಪಣೆ ಮಾಡಿದರು. ಅಪರ್ಣಾ ಮುಕುಂದ್‌ಜಿಯವರು ಕಾರ್ಯಕ್ರಮ ನಿರ್ವಹಣೆ ಮಾಡಿದರು.

ಈ ಉತ್ಸವಕ್ಕೆ ಮುಂಬಯಿ ನಗರವೇ ಇಲ್ಲದೇ, ಡೊಂಬಿವಲಿ, ಥಾಣೆ, ಕಲ್ಯಾಣ್, ಅಂಬರನಾಥ, ಬದ್ಲಾಪುರ, "ಬೋರಿವಲಿ ಮುಂತಾದ ಕಡೆಗಳಿಂದ ಭಕ್ತಾದಿಗಳು ಬಂದು ಭಾಗವಹಿಸಿದುದು ಉಸತ್ಸವದ ವೈಶಿಷ್ಟ್ಯತೆಯಾಗಿತ್ತು.

### ಸ್ವಾಗತ ಸಮಾರಂಭ

ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಈಚೆಗೆ ಎಂ.ಎ. ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭ ವನ್ನು ಹಮ್ಮಿಕೊಳ್ಳಲಾಯಿತು. ಡಾ. ಗಿರಿಜಾ ಶಾಸ್ತ್ರಿಯವರು ಮಾತನಾಡಿ ಸಾಹಿತ್ಯದ ಓದು ಮನುಷ್ಯತ್ವವನ್ನು ಕಲಿಸಿಕೊಡುತ್ತದೆ. ಮತ್ತು ಜೀವನದ ಎಲ್ಲಾ ಹಂತಗಳಲ್ಲಿ ಸಾಹಿತ್ಯ ಪ್ರಮುಖವಾಗಿದೆ. ಅದನ್ನು ಎಲ್ಲರೂ ಓದಿ ಅರಗಿಸಿಕೊಳ್ಳಬೇಕೆಂದು ಹೇಳಿದರು. ನಂತರ ವಿದ್ಯಾರ್ಥಿಗಳಿಂದ ಗೀತಗುಂಜನ ನಡೆಯಿತು. ಅನಂತರ ವಿಭಾಗದ ಮುಖ್ಯಸ್ಥರಾದ ಡಾ. ತಾಳ್ತಜೆ ವಸಂತ ಕುಮಾರ್‌ರು ಅಧ್ಯಕ್ಷೀಯ ಭಾಷಣ ಮಾಡುತ್ತಾ ಮುಂಬಯಿ ವಿಶ್ವವಿದ್ಯಾಲಯ ದಲ್ಲಿ ಕನ್ನಡ ವಿಭಾಗದ ಸ್ಥಾಪನೆಯ ಹಿನ್ನೆಲೆಯನ್ನು ವಿವರಿಸಿದರು. ಕಾರ್ಯಕ್ರಮವನ್ನು ಚಂದ್ರಶೇಖರಯ್ಯ ಬನ್ನಿಮಠ ನಿರ್ವಹಿಸಿದರು. ರಾಜಶ್ರೀ ಇನಾಮುದಾರ ಧನ್ಯವಾದಗಳನ್ನಿತ್ತರು. ಶ್ರೀ ಮೋಹನ್ ಬಿ. ಇವರಿಂದ ಸ್ವಾಗತ, ವಿದ್ಯಾರ್ಥಿಗಳಾದ ವಿಶ್ವನಾಥ ಅಳಗುಂಡಿಗಿ, ದಿನೇಶ ಶೆಟ್ಟಿ, ಮಾಣಿಕ್‌ರಾವ್ ಮತ್ತು ಮಲ್ಲಿಕಾರ್ಜುನ ಇವರಿಂದ ಅನಿಸಿಕೆಗಳು ಮಂಡನೆಯಾದವು.

ವರದಿ - ಚಂದ್ರಶೇಖರಯ್ಯ ಬನ್ನೀಮಠ.

### ಮುಂಬಯಿ ಕನ್ನಡ ಸಂಘದ ನೂತನ ಕಾರ್ಯಕಾರಿ ಸಮಿತಿ
### ಗೌ. ಅಧ್ಯಕ್ಷರಾಗಿ ಶ್ರೀ ಗುರುರಾಜ ಎಸ್. ನಾಯಕ್ ಪುನರಾಯ್ಕೆ



ಮುಂಬಯಿ ಮಹಾನಗರದಲ್ಲಿರುವ ಮುಂಬಯಿ ಕನ್ನಡ ಸಂಘದ ತಾ. 27-8-2005ರಂದು ನಡೆದ ವಾರ್ಷಿಕ ಮಹಾಸಭೆಯಲ್ಲಿ ಶ್ರೀ ಗುರುರಾಜ ಎಸ್. ನಾಯಕ್ 2005-2006, 2006-2007ನೇ ಸಾಲಿನ ಅಧ್ಯಕ್ಷ ರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಶ್ರೀ ನಾಯಕರು ಕಳೆದ 31 ವರ್ಷಗಳಿಂದ ಮುಂಬಯಿ ಕನ್ನಡ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ವಿವಿಧ ಪದಾಧಿಕಾರಿಯಾಗಿ ದುಡಿದಿರುತ್ತಾರೆ. ಕಳೆದ 4 ವರ್ಷಗಳಿಂದ ಅಧ್ಯಕ್ಷರಾಗಿ ದುಡಿದು ಸಂಘದ ಅಭಿವೃದ್ಧಿಗೆ ಶ್ರಮಿಸಿರುತ್ತಾರೆ. ಈಗ ಪುನಃ ಎರಡು ವರ್ಷದ ಸಾಲಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ. ಅಲ್ಲದೆ ತಾ. 3-9-2005ರಂದು ನಡೆದ ಕಾರ್ಯಕಾರಿ ಸಮಿತಿಯಲ್ಲಿ ಈ ಕೆಳಗಿನವರನ್ನು ಪದಾಧಿಕಾರಿಯಾಗಿ ಆಯ್ಕೆಮಾಡಲಾಯಿತು.

ಶ್ರೀ ಚಂದ್ರಶೇಖರ ರಾವ್ (ಉಪಾಧ್ಯಕ್ಷರು), ಶ್ರೀ ಬಿ. ನಾಗಭೂಷಣ (ಗೌ.ಪ್ರ. ಕಾರ್ಯದರ್ಶಿ), ಶ್ರೀ ಸೋಮನಾಥ ಕರ್ಕೇರ (ಗೌ. ಜೊತೆ ಕಾರ್ಯದರ್ಶಿ), ಶ್ರೀ ರಾಜೇಂದ್ರ ಆರ್. ಗಡಿಯಾರ್ (ಗೌ. ಕೋಶಾಧಿಕಾರಿ), ಶ್ರೀ ಶೇಖರ ಕಾಂಚನ್ (ಗೌ.ಪುಸ್ತಕ ಭಂಡಾರದ ಅಧಿಕಾರಿ), ಶ್ರೀಮತಿ ಸುಗುಣ ವಿ. ಶೆಟ್ಟಿ (ಪುಸ್ತಕಾಲಯ ಸಮಿತಿಯ ಗೌ. ಕಾರ್ಯಾಧ್ಯಕ್ಷೆ), ಶ್ರೀಮತಿ ಮೀರಾ ಆರ್. ರಾವ್ (ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ) ಕಾರ್ಯಕಾರಿ ಸಮಿತಿ ಸದಸ್ಯರು : ಶ್ರೀ ಎನ್‌ಪಿ. ಸುವರ್ಣ, ಶ್ರೀ ವಸಂತ ಎನ್. ವಡೆಯಲ್. ಡಾ. ಜಿ. ಡಿ. ಜೋಶಿ, ಶ್ರೀಮತಿ ಗಾಯತ್ರಿ ರಾಮು, ಶ್ರೀ ಪಿ. ವಿ. ಬಲಿಗಾರ, ಶ್ರೀ ಎ. ವಿ. ಜಯರಾಂ.

ವಿಶೇಷ ಆಹ್ವಾನಿತರಾಗಿ - ಶ್ರೀ ಪಿ.ಬಿ. ಪರಮೇಶ್ವರಪ್ಪ

ಮುಂಬಯಿ ಕನ್ನಡ ಸಂಘವು ಕಳೆದ 69 ವರ್ಷಗಳಿಂದ ಮುಂಬಯಿಯಲ್ಲಿ ಸಾಹಿತ್ಯಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ಮಾಡುತ್ತಾ ಇದೆ. ಸಂಘದಲ್ಲಿ 13 ಸಾವಿರಕ್ಕೂ ಮಿಕ್ಕಿ ಪುಸ್ತಕಗಳಿರುವ ಉತ್ತಮ ಗ್ರಂಥ ಭಂಡಾರವಿದೆ. ಉಚಿತವಾಚನಾಲಯ ದಲ್ಲಿ ಕನ್ನಡದ ಎಲ್ಲಾ ದಿನ ಪತ್ರಿಕೆಗಳು ವಾರ ಪತ್ರಿಕೆಗಳು, ಪಕ್ಷ ಪತ್ರಿಕೆಗಳು ಮತ್ತು ಮಾಸ ಪತ್ರಿಕೆಗಳಿವೆ. ಸಂಘದಲ್ಲಿ ಇನ್ನು ಕೆಲವು ಉತ್ತಮ ಕಾರ್ಯ ನಡೆಸಲು ಸಂಘದ ಅಧ್ಯಕ್ಷ ಶ್ರೀ ನಾಯಕರ ನೇತೃತ್ವದಲ್ಲಿ ಯೋಜನೆಯನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ.

### ಶರೀರ ವ್ಯಾಧಿಗೆ ಮನಸ್ಸೇ ಮೂಲ ಕಾರಣ
### - ಡಾ। ಸದಾನಂದ ಶೆಟ್ಟಿ

ಭಾಷೆ ಹೆಚ್ಚು ಗೊತ್ತಿದ್ದಷ್ಟು ಹೆಚ್ಚು ಜನರ ಜೊತೆ ಆತ್ಮೀಯವಾಗಿ ವ್ಯವಹರಿಸಬಹುದು. ಒಬ್ಬ ವೈದ್ಯ ರೋಗಿಯ ಜೊತೆ ಅವನ ಮಾತೃ ಭಾಷೆಯಲ್ಲಿ ಮಾತಾಡಿದರೆ ವೈದ್ಯರ ಬಗ್ಗೆ ಹೆಚ್ಚು ಭರವಸೆಯಾಗುವುದು. ಇದನ್ನು ನಾನು ನನ್ನ ಅನುಭವದಿಂದ ಹೇಳುತ್ತಿದ್ದೇನೆ. ಶರೀರ ವ್ಯಾಧಿಗೆ ಮನಸ್ಸೇ ಮೂಲ ಕಾರಣ. ಮನಸ್ಸನ್ನು ಸ್ವಾಸ್ಥ್ಯಸ್ವಸ್ಥವಾಗಿಡಬೇಕು ಎಂದು ಮುಂಬಯಿಯ ಪ್ರಸಿದ್ಧ ಹೃದಯ ರೋಗ ತಜ್ಞ ಹಾಗೂ ಸದಾನಂದ 'ಹೆಲ್ದೀ ಲಿವಿಂಗ್ ಸೆಂಟರ್' ನ ಸಿ.ಎಂ. ಡಿ. ಡಾ. ಸದಾನಂದ ಶೆಟ್ಟಿಯವರು ಹೇಳಿದರು.

ಅವರು ಕರ್ನಾಟಕ ಸಂಘ, ಮುಂಬಯಿಯ ವಿದ್ಯಾವಿಕಾಸದ ವತಿಯಿಂದ ದಿನಾಂಕ 07/08/05 ಸಂಜೆ 4.00 ಗಂಟೆಗೆ ಸಂಘದ ಕಿರು ಸಭಾಗೃಹದಲ್ಲಿ ಜರುಗಿದ ಪ್ರಸ್ತುತ ವರ್ಷದ ಕನ್ನಡ ಮರಾಠಿ ಭಾಷಾ ವರ್ಗದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತಾಡುತ್ತಿದ್ದರು.

ಅವರು ಮುಂದುವರಿಸುತ್ತಾ ಕನ್ನಡ ಹಾಗೂ ಮರಾಠಿ ಭಾಷೆ ಕಲಿಯಲು ಹೆಚ್ಚಾಗಿ ಹಿರಿಯ ಪ್ರಜೆಗಳೇ ಇಲ್ಲಿ ಸೇರಿದ್ದಾರೆ. ಅವರಿಗೆ ನಾನು ಪ್ರಮಾಣ ಪತ್ರವನ್ನು ನೀಡುವುದೊಂದು ಅವಿಸ್ಮರಣೀಯ ಅನುಭವ. ಸೇವಾ ನಿವೃತ್ತರಾದವರು ಈ ಪ್ರಕಾರ ತಮ್ಮ ಮನಸ್ಸನ್ನು ಬ್ಯುಸಿಯಾಗಿಡುವದು ಆರೋಗ್ಯಕ್ಕೆ ಉತ್ತಮ. ನಾಲ್ಕು ಜನರೊಡಗೂಡಿ ವಿಚಾರ ವಿನಿಮಯ, ಕೀರ್ತನೆ, ಆಧ್ಯಾತ್ಮಿಕ ಚಿಂತನೆಯನ್ನು ಮಾಡುವದು ಸಾಮಾಜಿಕ ಆರೋಗ್ಯ ದೃಷ್ಟಿಯಿಂದಲೂ ಉತ್ತಮ ಎಂದು ಹೇಳಿ ಶರೀರ ಸ್ವಾಸ್ಥ್ಯಕ್ಕೆ ಕೆಲವು ಮುಖ್ಯಾಂಶಗಳನ್ನು ನೀಡಿದರು.

ಪ್ರಾರ್ಥನೆಯಿಂದ ಉದ್ಘಾಟನಾ ಸಮಾರಂಭವು ಆರಂಭಗೊಂಡಿತು. ಸಂಘದ ಗೌ. ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್ ಪ್ರಾಸ್ತಾವಿಕ ಭಾಷಣ ಮಾಡಿದರು. ಮುಖ್ಯ ಅತಿಥಿಯ ಪರಿಚಯ ಸಂಘದ ಉಪಾಧ್ಯಕ್ಷ ಭರತ್‌ಕುಮಾರ್ ಪೊಲಿಪು ಮಾಡಿದರೆ, ಅಧ್ಯಕ್ಷ ಮನೋಹರ ಎಂ. ಕೋರಿಯವರು ಪುಷ್ಪಗುಚ್ಛ ಹಾಗೂ ನೆನಪಿನ ಕಾಣಿಕೆ ನೀಡಿ ಗೌರವಿಸಿದರು.

ಕಾರ್ಯಕ್ರಮದ ನಿರೂಪಣೆಯನ್ನು ಕನ್ನಡ ಕಲಿಯುವ ವಿದ್ಯಾರ್ಥಿನಿ ಪಲ್ಲವಿ ಪೆಡ್ನೇಕರ್ ಮಾಡಿದರು. ಲಕ್ಷ್ಮೀಸುಧೀಂದ್ರ, ಕೀರ್ತಿ ಗೋಖಲೆ ಮತ್ತು ಪಲ್ಲವಿ ಪೆಡ್ನೇಕರಿಗೆ ಅಧ್ಯಕ್ಷರು ಹೂಗುಚ್ಛ ನೀಡಿ ಗೌರವಿಸಿದರು. ಜೊತೆ ಕಾರ್ಯದರ್ಶಿ ವಂದಿಸಿದರು.

## ಅಭಿನಂದನೆ

ಶ್ರೀಮತಿ ವೀಣಾ ಮೂರ್ತಿ ಅವರು ಸಂಗೀತದ ವಿದ್ವತ್ ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಡನೆ ತೇರ್ಗಡೆಯಾಗಿದ್ದಾರೆ. ಗುರು ಶ್ರೀಮತಿ ವಿಜಯ ಲಕ್ಷ್ಮೀನಾಥನ್ ಅವರ ಹತ್ತಿರ ಸಂಗೀತ ಕಲಿತ ಇವರು, ನಮ್ಮ ಸದಸ್ಯರು ಮತ್ತು ನಾವು ಏರ್ಪಡಿಸಿದ್ದ ಸಂಗೀತ workshopಗಳಲ್ಲಿ ಉತ್ಸಾಹದಿಂದ ಭಾಗವಹಿಸಿದರು. ನೇಸರು ಶ್ರೀಮತಿ ವೀಣಾ ಮೂರ್ತಿ ಅವರನ್ನು ಅಭಿನಂದನಿಸಿ ಅವರಿಗೆ ಶುಭ ಕೋರುತ್ತದೆ.

ಶ್ರೀಮತಿ ಶ್ಯಾಮಲ ರಾಧೇಶ್ ಅವರು ಸಂಗೀತದ ವಿದ್ವತ್ ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಡನೆ ತೇರ್ಗಡೆಯಾಗಿದ್ದಾರೆ. ಗುರು ಶ್ರೀಮತಿ ವಿಜಯ ಲಕ್ಷ್ಮೀನಾಥನ್ ಅವರ ಹತ್ತಿರ ಸಂಗೀತ ಕಲಿತ ಇವರು, ನಮ್ಮ ಸದಸ್ಯರು ಮತ್ತು ನಾವು ಏರ್ಪಡಿಸಿದ್ದ ಸಂಗೀತ workshopಗಳಲ್ಲಿ ಉತ್ಸಾಹದಿಂದ ಭಾಗವಹಿಸಿದರು. ನೇಸರು ಶ್ರೀಮತಿ ವೀಣಾ ಮೂರ್ತಿ ಅವರನ್ನು ಅಭಿನಂದನಿಸಿ ಅವರಿಗೆ ಶುಭ ಕೋರುತ್ತದೆ.

ಶ್ರೀ ಅಮೃತ ದೇಸಾಯಿ ಅವರನ್ನು Interteck Testing Services (I) Pvt. Ltd. ಸಂಸ್ಥೆಯ ಜನರಲ್ ಮ್ಯಾನೇಜರ್ ಆಗಿ ನೇಮಿಸಲಾಗಿದೆ. ಬೆಂಗಳೂರಿನ SJP Polytechnicನಲ್ಲಿ Textilesನ ವಿಷಯ ಅಧ್ಯಯಿಸಿದ ಅಮೃತ ದೇಸಾಯಿಯವರಿಗೆ Textilesನ Impection. Testing ಮತ್ತು Marketing ಕ್ಷೇತ್ರಗಳಲ್ಲಿ ವಿಶಾಲವಾದ ಅನುಭವವಿದೆ. ನೇಸರು ಅಮೃತ ದೇಸಾಯಿ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತದೆ ಮತ್ತು ಅವರಿಗೆ ತಮ್ಮ ಹೊಸಕೆಲಸದಲ್ಲಿ ಯಶಸ್ಸನ್ನು ಕೋರುತ್ತದೆ.


## MATRIMONIAL

Wanted Mumbai based Kannada/Tamil Brahmin boy who is working, for Hoysala Karnataka Smartha Brahmin (Mysorean) girl aged 35, Central govt. employed. Staying with parents.

Gotra-Kashyapa, Rasi-Vrishabha, Nakshatra- Rohini

Contact: Shri H.V.N. Swamy 95251-2473288/2821107(Dombivili)

***

Wanted South Indian Brahmin Girl (Preferably Kannadiga) for Smartha Brahmin Boy-35 years- B.Com & Diploma in Computer and Financial Management- Accounts Officer in private company- Rs. 11,000/-p.m.- Tall (5 ft. 9 inch)- Wheat complexion- Graduate working girl preffered vadula gothra- Shtabhisa Star.


## ಬೆಂಗಳೂರಿನಲ್ಲಿ ಮಿಂಚಿದ ಮುಂಬಯಿ ಯುವಪ್ರತಿಭೆ

ಡೊಂಬಿವಲಿಯ ಮೈಸೂರು ಸಂಗೀತ ವಿದ್ಯಾಲಯದ ವಿದ್ಯಾರ್ಥಿನಿ ಸೌಮ್ಯ ಪ್ರಶಾಂತ್‌ರವರು ಕರ್ನಾಟಕ ಸರಕಾರ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದವರು ಆಯೋಜಿಸಿದ್ದ ಯುವ ಸೌರಭ ಕಾರ್ಯಕ್ರಮದಲ್ಲಿ ಕನ್ನಡ ಭವನ ನಯನ ಸಭಾಗೃಹದಲ್ಲಿ ಕರ್ನಾಟಕ ಸಂಗೀತ ಕಚೇರಿಯನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ಸೌಮ್ಯರವರು ತಮ್ಮ ಕಾರ್ಯಕ್ರಮವನ್ನು ಅಟ್ಟತಾಳದ ಕಾಂಭೋದಿ ರಾಗದೊಂದಿಗೆ ಆರಂಭಿಸಿ, ಮುದ್ದುಸ್ವಾಮಿ ದೀಕ್ಷಿತರ "ಶ್ರೀ ಮಹಾಗಣಪತ್ಯ" (ಗೌಳ) ಕೃತಿಯನ್ನು ಕಲ್ಪನಾಸ್ವರದೊಂದಿಗೆ ಸಾದರ ಪಡಿಸಿದರು. ನಂತರ ಸಿ.ಕೆ. ಶಂಕರನಾರಾಯಣರಾಯರ "ವನಜಾಕ್ಷಿಶ್ರೀ" (ವಲಚಿ) ಕೃತಿಯನ್ನು ಹಾಡಿ, ಶ್ರೀ ಪುರಂದರದಾಸರ ಕೃಷ್ಣ ಬಾರೋ(ರಾಗಮಾಲಿಕೆ) ಹಾಡಿದರು. ಕಾರ್ಯಕ್ರಮಕ್ಕೆ ಮುಖ್ಯವಾಗಿ ಆಯ್ದುಕೊಂಡಿದ್ದ ಕಯ್ಯಾಣಿ ರಾಗವನ್ನು ವಿಸ್ತಾರವಾಗಿ ಆಲಾಪನೆ ಮಾಡಿ ಶ್ಯಾಮಶಾಸ್ತ್ರಿಗಳ ಕೃತಿ ಹಿಮಾದ್ರಿಸುತೆಯನ್ನು ನೆರವಲ್, ಸ್ವರ ಪ್ರಸ್ತಾರದೊಂದಿಗೆ ಸಾದರ ಪಡಿಸಿ ರಸಿಕರ ಕರತಾಡನದ ಮೆಚ್ಚುಗೆಯನ್ನು ಗಳಿಸಿದರು. ಬಸವಣ್ಣನವರ ವಚನ "ಲೋಕದ ಡೊಂಕು" (ಜೋನಪುರಿ) ಮತ್ತು ಮರಾಠಿ ಅಭಂಗ ರೂಪ ತುಜೋದೇವಾ ಚೆನ್ನಾಗಿ ಮೂಡಿ ಬಂತು. ಡಿ.ವಿ.ಜಿ.ಯವರ ಅಂತಃಪುರ ಗೀತೆಯಿಂದ ಆಯ್ದ "ಅವರಾಗವ ಹಾಡುವೆ" (ಹಿಂದೋಳ) ಮಿತವಾದ ಆಲಾಪನೆ ಸ್ವರ ಪ್ರಸ್ತಾರದೊಂದಿಗೆ ಸಾದರ ಪಡಿಸಿ ಸಾಹಿತ್ಯಾಭಿಮಾನಿಗಳ ಮೆಚ್ಚುಗೆಯನ್ನು ಪಡೆದರು. ಪುರಂದರ ದಾಸರ ಉಗಾಭೋಗದ ಸಾಹಿತ್ಯವನ್ನು ಅಳವಡಿಸಿಕೊಂಡು ಸಂಗೀತ ವಿದುಷಿ ಉಮಾ ನಾಗಭೂಷಣ್ ರಚಿಸಿರುವ ತಿಲ್ಲಾನ (ಹಂಸಧ್ವನಿ) ವನ್ನು ಪರಿಣಾಮಕಾರಿಯಾಹಿ ಹಾಡಿದುದು ಸಭಿಕರೆಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಮಂಗಳದೊಂದಿಗೆ ಕಾರ್ಯಕ್ರಮವನ್ನು ಸಂಪನ್ನ ಮಾಡಿದರು. ಪಕ್ಕವಾದ್ಯದಲ್ಲಿ ಯುವ ಕಲಾವಿದರಾದ ಶ್ರೀನಿಧಿ ಪಿಟೀಲು, ನಂಜುಂಡಮೂರ್ತಿ ಮೃದಂಗದಲ್ಲಿ ಉತ್ತಮವಾಗಿ ಸಹಕರಿಸಿ ಕಾರ್ಯಕ್ರಮ ಕಳೆಗಟ್ಟುವಂತೆ ಮಾಡಿದರು. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹ ನಿರ್ದೇಶಕ ಶ್ರೀ ಪಿ.ಎಂ. ಭಾವೀಕಟ್ಟೆಯವರು ಉಪಸ್ಥಿತರಿದ್ದು ಯುವ ಕಲಾವಿದರುಗಳಿಗೆ ಪುಷ್ಪಗುಚ್ಛ ಹಾಗೂ ಪ್ರಮಾಣ ಪತ್ರವನ್ನಿತ್ತು ಗೌರವಿಸಿದರು.

ಹೊರನಾಡ ಕನ್ನಡ ಕಲಾವಿದೆಯಾಗಿ ಸಂಗೀತ ವಿದುಷಿ ಶ್ರೀಮತಿ ಉಮಾನಾಗ ಭೂಷಣ್ ಒಳನಾಡಾದ ಕರ್ನಾಟಕದಲ್ಲೆಲ್ಲಾ ಸಂಗೀತ ಕಚೇರಿಗಳನ್ನು ನಡೆಸುತ್ತಾ ರಸಿಕರ, ವಿದ್ವಾಂಸರ ಪತ್ರಿಕಾ ವಿಮರ್ಶಕರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಈಗ ಅವರು ಶಿಷ್ಯವೃಂದವನ್ನು ತಯಾರು ಮಾಡಿ ಕರ್ನಾಟಕದಲ್ಲೂ ಹೊರನಾಡಿನ ಪ್ರತಿಭೆಯನ್ನು ಪ್ರಚುರ ಪಡಿಸುತ್ತಿರುವುದು ನಿಜಕ್ಕೂ ಪ್ರಶಂಸನೀಯ ಹಾಗೂ ಅಭಿನಂದನಾರ್ಹರು.

## ಕುಮಾರಿ ದರ್ಶನಳ ಸಾಧನೆ



ಡೊಂಬಿವಲಿಯ ಮೈಸೂರು ಸಂಗೀತ ವಿದ್ಯಾಲಯದ ಕಿರಿಯ ವಿದ್ಯಾರ್ಥಿನಿ ಕುಮಾರಿ ದರ್ಶನ ಕಳೆದ ಮೇ ತಿಂಗಳಲ್ಲಿ ನಡೆದ ಕರ್ನಾಟಕ ಸರಕಾರದ ಸಂಗೀತ ಪರೀಕ್ಷೆಗಳಲ್ಲಿ ಭಾಗವಹಿಸಿ ಜೂನಿಯರ್ ಪರೀಕ್ಷೆಯಲ್ಲಿ ಶೇ. 89.5% ಉತ್ತಮ ಶ್ರೇಯಾಂಕದೊಂದಿಗೆ ತೇರ್ಗಡೆಯಾಗಿದ್ದಾಳೆಂದು ವಿದ್ಯಾಲಯದ ಪ್ರಕಟಣೆ ತಿಳಿಸುತ್ತದೆ.

ಕುಮಾರಿ ದರ್ಶನ ಅನೇಕ ಸಂಗೀತ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದ ಪ್ರತಿಭಾನ್ವಿತ ಉದಯೋನ್ಮುಖಿ ಕಿರಿಯ ಕಲಾವಿದೆಯಾಗಿರುತ್ತಾಳೆ.



*Vidwan T.K. Govinda Rao (recipient of Swarmuthy V.N. Rao memorial award) and vidwan R.R. Keshava Murthy (recipient of Veena Seshanna Memorial Award), along with other dignitaries.*
*L to R: Sri T.N. Chaturvedi, Governor of Karnataka, Shri Mysore V. Subramanya (Managing Trustee), Dr. M.R.V. Prasad, Shri H. Kamalanath (President, Gayana Samaja), Shri Chiranjeevi Singh (Former Ambassador of India to unesco) and Sri Raghavendra*

# CONDUCTED PACKAGE TOURS

## NORTH INDIA TOURS FROM NEW DELHI:

| | | | |
|---|---|---|---|
| Jaipur – Agra – Mathura | - 2 days | - Every Monday / Wednesday / Friday | - Rs. 2100 |
| Shimla – Kullu – Manali – Chandigarh | - 6 days | - Every Thursday / Friday | - Rs. 6900 |
| Chandigarh – Manali – Vaishnodevi - Amritsar | - 9 days | - Every Monday / Wednesday | - Rs. 9800 |
| Kashmir Package | - 7 days | - Every Friday | - Rs. 7000 |

## EASTERN / WESTERN SOUTHERN TOURS

| | | | |
|---|---|---|---|
| Kolkata – Gangtok – Darjeeling | - 7 days | - Every Day | - Rs. 8500 |
| Shirdi – Ajanta – Ellora - Aurangabad | - 4 days | | - Rs. 2500 |
| Goa Package | - 4 days | | - Rs. 2990 |
| Ramoji Film City Tour | - Daily | | -Rs. 350 |
| Nagarjuna Sagar Dam Tour | - Every Saturday / Sunday | | - Rs. 385 |
| Mysore – Ooty – Kodaikanal | - 5 Days – Daily | | - Rs. 3450 |
| Vizag – Araku Valley – Borra caves – Rishikonda Beach | - 3 Days – Daily | | - Rs. 1975 |
| Tamil Nadu Tour | - 8 Days – Every Saturday | | Rs. 4700 |
| Kerala – The back waters | - 4 Days – Daily | | Rs. 8800 |

**PACKAGE INCLUDES :** Transport by Volvo / Super Deluxe Buses, Twin sharing room accommodation
Guide service and even Pure Vegetarian food in some of the tours

## HOTEL SOUTHERN, NEW DELHI IS OUR ASSOCIATES

# SOUTHERN TRAVELS (P) LTD

**(RECOGNIZED BY MINISTRY OF TOURISM, GOVERNMENT OF INDIA)**

**HEAD OFFICE :** 18/2, ARYA SAMAJ ROAD, KAROL BAGH, NEW DELHI – 110 005
TEL.: 2572 2210 / 25739508 FAX : 011 25751308

**BRANCH OFFICE :** F-24, DADAR MANISH A.C. MARKET, NEAR DADAR W. RLY. STN.,
SENAPATI BAPAT MARG, DADAR (W), MUMBAI – 28
TEL.: 2432 6895 / 2432 6688 MOBILE : 98922 16168

E-mail : southerntravels@vsnl.com
website : southerntravelsindia.com

**We have vacancies for Graduate at our Branch office for Front office Executive/Marketing Executive, Interested candidates may send their BIO-Data with passport size photo to us.

No. TECH/47-202/MBI/2003-05
Date of Posting : 10-09-2005

# ಸ್ವತಂತ್ರ ಭಾರತ ಒಂದು ಅವಲೋಕನ

ನಮ್ಮ ಈಗಿನ ಸ್ವತಂತ್ರ ಬದುಕಿನ ಆನಂದಕ್ಕೆ ಕಾರಣರಾದ ಮಹನೀಯರಿಗೆ ಕೃತಜ್ಞತೆ ಸಲ್ಲಿಸಲು ಸದವಕಾಶ ಮಹಾತ್ಮಗಾಂಧಿ, ಜವಾಹರ್‌ಲಾಲ್ ನೆಹರು, ತಿಲಕ್, ಸುಭಾಷ್‌ಚಂದ್ರಭೋಸ್‌ರಂತಹ ಅನೇಕ ಉಜ್ವಲ ದೇಶಭಕ್ತ ನಾಯಕರು ಮತ್ತು ಅವರ ಅಸಂಖ್ಯಾತ ನಿಷ್ಠಾವಂತ ಅನುಯಾಯಿಗಳು ಈ ಮಹತ್ಸಾಧನೆಯ ರೂವಾರಿಗಳು. ಈ ಎಲ್ಲಾ ಮಹಾನೀಯರ, ಮಹಾನ್‌ತ್ಯಾಗ ಮತ್ತು ನಿಸ್ವಾರ್ಥಶ್ರಮದ ಉತ್ಕೃಷ್ಟಫಲ ಭಾರತದ ಸ್ವಾತಂತ್ರ್ಯ. ಈ ಅವಿಸ್ಮರಣೀಯರ ಶ್ರೇಷ್ಠ ತ್ಯಾಗದ ಫಲಾನುಭವಿಗಳು ನಾವು ಅವರಿಗೆ ನಾವು ಸದಾ ಋಣಿ. ಈ ದಿನ ಅವರಿಗೆ ತಲೆಬಾಗಿ ನಮಿಸೋಣ, ಈ ಮಹಾತ್ಯಾಗಿಗಳು ಪ್ರತಿಪಾದಿಸಿದ ಸ್ವಾತಂತ್ರ್ಯದ ಧ್ಯೇಯವಾಕ್ಯ ಜಗತ್ತಿನ ಜೀವನ ಪಥವಾಗಲಿ. ಉತ್ಕೃಷ್ಟ ಭಾರತ ನಮ್ಮ ಶಪಥವಾಗಲಿ.

✧ **ಕೃಷಿ :** ಬೆಳೆ ವಿಮೆಗಾಗಿ ರೂ. 200 ಕೋಟಿಗಳು, ಬಿತ್ತನೆ ಬೀಜ ವಿತರಣೆಗೆ ರೂ. 60 ಕೋಟಿಗಳು, ಆವರ್ತ ನಿಧಿಗೆ ರೂ. 200 ಕೋಟಿಗಳು, ಕೃಷಿ ಸಂಶೋಧನೆಗೆ ರೂ. 27 ಕೋಟಿಗಳು, ಶೇಕಡ 6ರ ಬಡ್ಡಿ ದರದಲ್ಲಿ ಸಾಲ ನೀಡಲು ರೂ. 30 ಕೋಟಿ ಸಹಾಯಧನ ಒದಗಿಸಲಾಗಿದೆ. ಕೃಷಿ ಸಾಲಗಳ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಸಂಬಂಧ ರೂ. 950 ಕೋಟಿಗಳನ್ನು ಸಹಕಾರಿ ಸಂಸ್ಥೆಗಳಿಗೆ ಮರು ಪಾವತಿಸಲಾಗಿದೆ. ✧ **ನೀರಾವರಿ :** ನೀರಾವರಿ ಅಭಿವೃದ್ಧಿಗಾಗಿ ರೂ. 3942 ಕೋಟಿಗಳ ದಾಖಲೆ ಹಣವನ್ನು ಪ್ರಸಕ್ತ 2005-06ನೇ ಸಾಲಿನಲ್ಲಿ ಹಂಚಿಕೆ ಮಾಡಲಾಗಿದೆ. ✧ **ಆರೋಗ್ಯ :** ಸ್ತ್ರೀ ಶಕ್ತಿ ತಂಡಗಳ 2.5 ಲಕ್ಷ ಪರಿಶಿಷ್ಟ ಸದಸ್ಯರಿಗೆ ಸಾರ್ವತ್ರಿಕ ವಿಮಾ ಯೋಜನೆಯೊಂದನ್ನು ಜಾರಿಗೊಳಿಸಲಾಗುವುದು. 27 ಜಿಲ್ಲೆಗಳಿಗೆ ತಲಾ ಒಂದರಂತೆ ಅಂಬುಲೆನ್ಸ್ ಸೌಕರ್ಯ ಹಾಗೂ 39 ಹಿಂದುಳಿದ ತಾಲ್ಲೂಕುಗಳ ವ್ಯಾಪ್ತಿಯ 399 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 24 ಗಂಟೆಗಳ ನಿರಂತರ ಸೇವೆ ಕಲ್ಪಿಸಲಾಗುವುದು. ✧ **ಶಿಕ್ಷಣ :** ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಮತ್ತು ಸಾಕ್ಷರತೆ ಪ್ರಮಾಣದಲ್ಲಿ ಸುಧಾರಣೆ ತರಲು 4,687 ಪ್ರಾಥಮಿಕ ಹಾಗೂ 2,104 ಪ್ರೌಢ ಶಾಲಾ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದೆ. ಚಾಮರಾಜನಗರ ಮತ್ತು ಗುಲ್ಬರ್ಗಾ ಜಿಲ್ಲೆಯ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಉಪಗ್ರಹದ ನೆರವಿನೊಂದಿಗೆ ದೂರದರ್ಶನ ಹಾಗೂ ರೇಡಿಯೋ ಮೂಲಕ ಮಕ್ಕಳಿಗೆ ಕಲಿಯುವ ಅವಕಾಶ ಕಲ್ಪಿಸಲಾಗಿದೆ. ✧ **ಮೂಲ ಸೌಕರ್ಯ :** ಬೆಂಗಳೂರು ಮಹಾನಗರಕ್ಕೆ ರೂ. 390 ಕೋಟಿಗಳ ಹೈ-ಟೆಕ್ ಸಿಟಿ ಯೋಜನೆ ಮತ್ತು ರೂ. 750 ಕೋಟಿ ವೆಚ್ಚದ ಪರಿಫೆರಲ್ ರಿಂಗ್ ರಸ್ತೆ ಯೋಜನೆ ಶೀಘ್ರದಲ್ಲೇ ಅನುಷ್ಠಾನ. ರೂ. 3883 ಕೋಟಿಗಳ ವೆಚ್ಚದಲ್ಲಿ ಕಾವೇರಿ 4ನೇ ಹಂತದ 2ನೇ ಘಟಕದ ಯೋಜನೆಗೆ ಚಾಲನೆ. ✧ **ವಿದ್ಯುತ್ :** ರಾಜೀವ್‌ಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿ ರೂ. 1026 ಕೋಟಿ ವೆಚ್ಚಗಳಲ್ಲಿ 19 ಲಕ್ಷ ಗ್ರಾಮೀಣ ಕುಟುಂಬಗಳಿಗೆ ವಿದ್ಯುತ್ ಸೌಕರ್ಯ, ಬಡತನ ರೇಖೆಗಿಂತ ಕೆಳಗಿರುವ ಎಲ್ಲಾ ಗ್ರಾಮೀಣ ಕುಟುಂಬಗಳಿಗೆ ಉಚಿತ ವಿದ್ಯುತ್ ಸಂಪರ್ಕ ನೀಡಲು ನಿರ್ಧಾರ. ✧ **ಕೈಗಾರಿಕೆ :** ರೂ. 23,000 ಕೋಟಿಗಳ ಬಂಡವಾಳ ಹೂಡಿಕೆಯ ಒನ್‌ಜಿಸಿ ಯೋಜನೆಗೆ ಪ್ರಧಾನಿ ಅನುಮೋದನೆ. ಕೈಗಾರಿಕೆ ವಲಯದಲ್ಲಿ ರೂ. 45,600 ಕೋಟಿ ಮೌಲ್ಯದ ಬಂಡವಾಳ ಹೂಡಿಕೆಗೆ ರಾಜ್ಯ ಸರ್ಕಾರದ ಅನುಮೋದನೆ. ✧ **ಹೈಕೋರ್ಟ್ ಪೀಠ :** ಧಾರವಾಡ ಮತ್ತು ಗುಲ್ಬರ್ಗಾ ನಗರಗಳಲ್ಲಿ ಹೈಕೋರ್ಟ್ ಸಂಚಾರಿ ಪೀಠಗಳಿಗಾಗಿ ಬಹುದಿನಗಳಿಂದ ಕಾಣುತ್ತಿದ್ದ ಕನಸು ನನಸಾಗುತ್ತಲಿದೆ. ✧ **ಸುವರ್ಣ ಕರ್ನಾಟಕ :** "ಸುವರ್ಣ ಕರ್ನಾಟಕ", "ಬೃಹತ್ ಕರ್ನಾಟಕ" ಮತ್ತು ಕರ್ನಾಟಕ ಗೆಜೆಟಿಯರ್ "ಸುವರ್ಣ ಪಥ" ಎಂಬ ಮೂರು ಸಂಪುಟಗಳನ್ನು ಸುವರ್ಣ ಕರ್ನಾಟಕದ ವರ್ಷಾಚರಣೆಯ ಸಂದರ್ಭದಲ್ಲಿ ಬಿಡುಗಡೆ ಮಾಡಲಾಗುವುದು.

ಕರ್ನಾಟಕ ವಾರ್ತೆ

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647 ● Fax : 2401 0574
Email : karunadu@bom5.vsnl.net.in
Printed at Aarati Art Printers, Fort, Mumbai-400 001. ☏ 2266 3361 / 2266 5938